(SRI SUBHASH ASTURE)

difficult to manage the existing research centres and colleges under this University. Therefore, there is need for one more Agricultural University.

MADAM SPEAKER :—The hon. member may continue his speech after recess.

The House will now rise and meet again after half-an-hour.

The House adjourned at thirty Minutes past three of the clock and reassembled at four of the clock.

Madam Speaker in the Chair

STATEMENT OF THE CHIEF-MINISTER

Re: *The news-item on the behaviour of a Minister of State.*

SRI D. DEVARAJ URS (Chief Minister): I wish to make the following statement.

On 18-5-1973, at about 11-30 A.M., the Hon'ble Minister of State for Home, Sri R. D. Kittur, telephoned to the Deputy Commissioner of Police, Law & Order, Bangalore City and requested him to meet him at his residence. Accordingly, the Deputy Commissioner of Police proceeded to the residence of the Hon'ble Minister and met him there.

The Minister told the Deputy Commissioner that on his return from Delhi he had found one Miss Sumitra Desai, said to be from Bombay, staying in his house. The Minister told the Deputy Commissioner of Police that he understood from Miss Sumitra Desai that one Miss Padma

who was working in an institute for mentally retarded children in Bannerghatta was her friend. The Minister requested the Deputy Commissioner for assistance as he wanted Miss Sumitra Desai to be dropped at the residence of Miss Padma in the premises of the institute.

At the request of the Hon'ble Minister, the Deputy Commissioner instructed the Assistant Sub-Inspector of Munireddypalya Police Station to send a taxi to the Minister's residence. Since no taxi was available at Munireddypalya, the Assistant Sub-Inspector requested the Assistant Commissioner of Police, Malleswaram to send a taxi to Munireddypalya. Acting on the instructions of the Assistant Commissioner of Police, Malleswaram the Police Sub-Inspector of Malleswaram Police Station sent a taxi bearing No. MYD 1836 driven by one Sardar from the Malleswaram Taxi Stand to Munireddypalya Police Station. On arrival of the Taxi at Munireddypalya Police Station, since the driver did not know the residence of the Minister, a Constable who was in mufti was sent to show the house.

At about 2-00 P. M., when the taxi reached the residence of the Minister, Sri Renukappa, the Personal Assistant to the Minister brought a young lady from inside the house and made her sit in the taxi. It is reported that the lady was about 25 years of age, fair complexioned and was carrying a plastic hand-bag. Sri Renukappa asked the Police Constable also to go with them and directed the driver to proceed towards Bannerghatta road. According to the Constable, the lady, Miss Sumitra Desai, appeared to be a normal person and was talking during the journey with Sri Renukappa, sometimes in English and sometimes in Hindi. The Constable could not follow the conservation as he did not know these languages. On Bannerghatta Road, near the Ashrama of Shivabalayogi, Sri Renukappa directed the taxi to be driven to another building which had a board, "Asha Niketan".

(SRI D. DEVARAJ URS)

"Asha Niketan" is an institute for the mentally handicapped, managed by a Committee headed by Dr. Narayana Reddy of the Mental Hospital, Bangalore. The institute has 7 members of staff headed by one Sri John, who has been working there since October 1972. The institute has 13 inmates, all boys aged 17 years, mentally retarded, and admitted by their parents or guardians who also contribute according to their ability towards the cost of maintenance of the boys.

When the taxi arrived at the institute, at about 3-00 P. M. Sri Renukappa escorted Miss Sumitra Desai and met Sri John. Sri Renukappa introduced himself as the Personal Assistant to the Minister of State for Home and said that the Minister had directed that Miss Sumitra Desai should be admitted in the institute. While Sri John was explaining that the institute took in only mentally retarded young men aged 17 and over, another member of the staff, Miss D'Costa, who came there recognised Miss Desai as the person whom she had met in Panjim in Gao in January last wheh she had gone there on vacation. According to Miss D'Costa she met Sumitra Desai while waiting for a bus. They fell into conversation during the course of which Miss D'Costa had told Miss Desai that she was working in Bangalore.

Since Miss D'Costa recognised Miss Sumitra Desai, she was allowed to stay in one of the rooms of Ladies Staff Hostel. Thereafter, Sri Renukappa returned to Vidhana Soudha along with the Police Constable in the same taxi and further the Police Constable returned to Munireddypalya in it.

Next morning, *i. e.*, on 19-5-1973 by about 7-00A.M. Miss Desai had bathed and was ready to leave the Ashram. Miss D' Costa states that Miss Sumitra Desai told her that she would either go to Goa or Bombay.

Sri John who had arrived at that time, offered to drop Miss Desai as he had to proceed to M/s. International Instruments Limited. Sri John and Miss Desai left in his van at about 9-30 A. M. Miss Desai got down at the Bannerghatta Circle and he proceeded to his destination. No further information is available regarding the movements or the whereabouts of Miss Sumitra Desai.

According to Miss D' Costa, Miss Sumitra Desai appeared to be normal though emotionally upset. It is also learnt that Miss Desai reportedly told Miss D' Costa when they met at Panjim that she was working for her Ph. D. in English literature. She had also told Miss D' Costa that her mother lived in Santa Cruz in Bombay. No cogent explanation as to why Miss Desai came to Bangalore is available.

Vigorous efforts are being made to locate Miss Sumitra Desai to enable further enquiries to be made.

I will also read the letter sent by the Minister concerned in this behalf :

"My dear Chief Minister,

Unfortunately there has been a lot of controversy both in the press and in the legislature regarding the lady by name Sumithra Desai who met me on 18-5-1973 at my residence. In this connection, I wish to inform you the relevant facts :

I returned from Delhi on 18-5-1973 and on reaching my residence at about 9 A.M. I was informed by my P. A. that a lady was waiting for an interview with me at my residence. I met this lady who introduced herself as Sumithra Desai and when the lady began to talk in an incoherent manner, I had no alternative but to inform the police to arrange to send her away.

(SRI D. DEVARAJ URS)

Unfortunately, this incident has developed into a controversy both in the press and legislature.

In these circumstances, I wish to avoid further embarassment and therefore, I feel that I should immediately resign from the Ministry in order to enable you to hold an enquiry into this matter so that the Government and the public may come to know the true facts.

I take this opportunity to thank you for all the consideration shown to me while in office".

The letter was sent to day by the Minister concerned. I have sent this letter of regsignation with my recommendation to the Governor to accept.

ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಈಗ ಮಂತ್ರಿಗಳಾಗಿದ್ದವರು ರಾಜೀನಾಮೆ ಕೊಟ್ಟಿರುವ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ.

ಈಗ ನಮ್ಮ ಪೋಲೀಸ್ ವರದಿ ಪ್ರಕಾರ ಏನು ನಡೆದಿದೆ ಎನ್ನುವುದನ್ನು ಈ ಸಭೆಯ ಮುಂದೆ ನಾನು ಯಾವುದೊಂದೂ ಮರೆ ಮಾಚದೆ ಇಟ್ಟಿದ್ದೇನೆ. ಇದಕ್ಕಿಂತ ಹೆಚ್ಚಿಗೆ ನನಗೆ ಅಧಿಕೃತವಾದ ಯಾವ ವರ್ತಮಾನವೂ ಸಿಕ್ಕಿಲ್ಲ. ಈಗಾಗಲೇ ಈ ವಿಷಯದ ಬಗ್ಗೆ ಹೇಳಿದ್ದೇನೆ. ನನ್ನ ಹೇಳಿಕೆಯ ಕೊನೆಯಲ್ಲಿ ಇದರ ಬಗ್ಗೆ ತೀವ್ರವಾಗಿ ಎನ್‌ಕ್ವೈರಿ ಮಾಡುತ್ತೇನೆ ಎಂದು ಹೇಳಿದ್ದೇನೆ. ಈ ಎನ್‌ಕ್ವೈರಿ ಪೂರ್ಣವಾಗಿ ಮಾಡಿ ಅದರಲ್ಲಿ ನಮಗೆ ಸಂಬಂಧಪಟ್ಟ ವಿಷಯಗಳು ಏನಾದರೂ ಇದೆಯೋ, ಇಲ್ಲವೇ ಎಂಬತಕ್ಕಂಥಾದ್ದೆಲ್ಲಾ ನಮ್ಮ ಸರಕಾರದ ಗಮನಕ್ಕೆ ಬರುವುದಕ್ಕೆ ಮುಂಚೆ ಈಗ ನನ್ನ ಮುಂದೆ ಇರತಕ್ಕಂಥ ವರದಿ ಏನು ಹೊರಬೀಳುತ್ತಾ ಇದೆ. ಇದೇ ಹಾಲಿ ನಮ್ಮ ಮುಂದೆ ಇರತಕ್ಕಂಥಾ ವರದಿ ಇದ್ದುದರಿಂದ ಏನು ಹೊರಬೀಳುತ್ತಿದೆ, ಏನು ಇನ್‌ಫರೆನ್ಸ್ ಮಾಡಬಹುದು ಎನ್ನುವ ವಿಚಾರದಲ್ಲಿ ನನಗೆ ದೊರೆಯತಕ್ಕಂಥಾದ್ದು ಮತ್ತು ಈಗ ನಮ್ಮ ಮುಂದೆ ಇರತಕ್ಕಂಥ ಅಧಿಕೃತ ವರದಿಯ ಆಧಾರದ ಮೇಲೆ ಮಿನಿಸ್ಟರ್ ಯಾವುದೇ ರೀತಿಯ ತಪ್ಪಿತಸ್ಥರು ಎಂದು ಹೇಳುವುದಕ್ಕೆ ಬರುವುದಿಲ್ಲ. ಹಾಗೂ ಯಾವುವೇ ರೀತಿಯಾಗಿ ಸಂಬಂಧಪಟ್ಟ ಮಿನಿಸ್ಟರ್ ಅವರ ಮಾರಲ್ ಟರ್ಪಿಟ್ಯೂಡ್ ಅಂದರೆ ನೈತಿಕ

ವಾದಂಥ ಅಸಭ್ಯ ವರ್ತನೆ ಏನಾದರೂ ಇದೆಯೇ ಎನ್ನುವುದೂ ಕೂಡ ಇದರಿಂದ ಏನೂ ಹೊರ ಬೀಳುವುದಿಲ್ಲ. ಮತ್ತೆ ಈ ಸಂದರ್ಭದಲ್ಲಿ ಹಿಂದೆ ಕೆಲವು ಘಟನೆಗಳು ಬೇರೆ ಕಡೆ ನಡೆದಿರತಕ್ಕಂಥಾದ್ದು ನಾವು ಸ್ವಲ್ಪ ಗಮನಕ್ಕೆ ತಂದುಕೊಂಡರೆ ಇಲ್ಲಿ ಸಭೆಯಲ್ಲಿ ಮಾತನಾಡುವಾಗ ಇಂಗ್ಲೆಂಡ್‌ನಲ್ಲಿ ನಡೆದಂಥ ಘಟನೆಯ ವಿಚಾರ ಹೇಳಿದರು. ಕ್ರಿಸ್ಟೈನ್ ಕೀಲರ್ ಮತ್ತು ಪ್ರಫ್ಯೂಮ ಬಗ್ಗೆ ನಡೆದಂಥ ಘಟನೆ ವಿಷಯ ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್ :—ಇನ್ನೂ ಎರಡು ಘಟನೆ ನಡೆದಿದೆ.

ಶ್ರೀ ಡಿ. ದೇವರಾಜ್ ಅರಸ್ :—ಆ ವಿಷಯಕ್ಕೂ ಬರುತ್ತೇನೆ. ಆ ಘಟನೆ ಏನು ಆಯಿತು ಎನ್ನುವುದು, ಅನೇಕ ಮಾನ್ಯ ಸದಸ್ಯರಿಗೆ ಅದರ ಪೂರ್ಣ ವಿವರ ಗೊತ್ತಿದೆ. ಕ್ರಿಸ್ಟೈನ್ ಕೀಲರ್ ಎನ್ನತಕ್ಕಂಥ ವ್ಯಕ್ತಿ ಪ್ರಾಸ್ಟಿಟ್ಯೂಟ್ ಆಗ್ಗೆ ಅವರ ಮನೆಗೆ ಒಬ್ಬ ರಷ್ಯನ್ ಡಿಪ್ಲಮೇಟ್ ಹೋಗುತ್ತಾ ಇದ್ದರೂ ಕೂಡ ಆಗಿಂದಾಗ್ಗೆ ಆಕೆಯ ಸಂಬಂಧವನ್ನು ಪ್ರಫ್ಯೂಮ ಎನ್ನತಕ್ಕ ಆಗಿನ ಕ್ಯಾಬಿನೆಟ್‌ನಲ್ಲಿದ್ದ ಡಿಫೆನ್ಸ್ ಮಿನಿಸ್ಟರ್‌ರವರು ಇಟ್ಟುಕೊಂಡು ಆಕೆಯ ಸ್ನೇಹ ಮಾಡಿದ್ದರು. ಅದು ಹೊರಬಿದ್ದಾಗ ಸರ್ಕಾರದ ದೃಷ್ಟಿಯಲ್ಲಿ, ಸಾರ್ವಜನಿಕ ದೃಷ್ಟಿಯಲ್ಲಿ ಅವೆಲ್ಲವೂ ಮಾರಲ್ ಟರ್ಪಿಟ್ಯೂಡ್ ಆಗುವುದರ ಜೊತೆಗೆ, ಸ್ಟೇಟ್ ಸೀಕ್ರೆಟ್ಸ್ ಏನಾದರೂ ಇದ್ದರೆ ಅಚಾತುರ್ಯದಿಂದ ಹೆಣ್ಣು ಮಕ್ಕಳ ಸ್ನೇಹದಿಂದ ಅವರಿಗೆ ಇವರು ಹೇಳಿಯಾಗಲಿ ಅಥವಾ ಇವರಿಂದ ಅವರು ಉಪಾಯದಿಂದ ಎಕ್ಸ್‌ಟ್ರಾಕ್ಟ್ ಮಾಡಿಯಾಗಲಿ ತಿಳಿದುಕೊಂಡು ಅದು ರಷ್ಯನ್ ಡಿಪ್ಲಮ್ಯಾಟ್‌ಗೆ ಕೊಡುವುದಕ್ಕೆ ಸಾಧ್ಯತೆ ಇರಬಹುದೇ ಎನ್ನುವ ಒಂದು ದೊಡ್ಡ ಅಪವಾದನೆ ಬಂತು. ಆ ಪ್ರಕರಣ ಏನು ಆಗಿದೆ ಎನ್ನುವುದು ನಮಗೆ ಗೊತ್ತು. ಅದಕ್ಕೆ ಅವರು ಆ ಸ್ಥಾನವನ್ನು ಬಿಡಬೇಕಾಗಿ ಬಂತು, ಬಿಟ್ಟರು. ಮೊನ್ನೆತಾನೇ ಒಂದೆರಡು ಘಟನೆಗಳು ಬ್ರಿಟನ್‌ನಲ್ಲಿ ನಡೆದವು. ಅವೊತ್ತೇ ಅಲ್ಲಿ ಪತ್ರಿಕಾ ವರದಿ ಪ್ರಕಾರ ಸಂಬಂಧಪಟ್ಟ ಮಂತ್ರಿಗಳು ಕಾಲ್‌ಗರ್ಲ್ಸ್ ಜೊತೆಯಲ್ಲಿ ಒಂದು ರೀತಿಯಾದ ಸಂಪರ್ಕ ಇಟ್ಟುಕೊಂಡಿದ್ದರು. ಅದನ್ನು ಅವರೇ ಹೊರಗೆಡವಿದರು. ಅವರು ಪತ್ರಿಕಾ ವರದಿ ಪ್ರಕಾರ ಒಪ್ಪಿಕೊಂಡಿದ್ದಾರೆ, ಅವರು ರಿಸೈನ್ ಮಾಡಿದ್ದಾರೆ. ಅದನ್ನು ನಾನು ಹೇಳುವುದಕ್ಕೆ ಏತಕ್ಕೆ ಬಂತು ಎಂದರೆ ಈಗ ಬ್ರಿಟನ್‌ನಲ್ಲಿ ಮೊನ್ನೆ ನಡೆದ ಘಟನೆಗೂ, 10 ವರ್ಷದ ಹಿಂದೆ ನಡೆದ ಘಟನೆಗೂ ಈಗ ಪೂರ್ಣವಾಗಿ ನಮ್ಮ ಮುಂದೆ ಇರತಕ್ಕಂಥ ಘಟನೆಗೂ, ಎಲ್ಲಾ ರೀತಿಯಲ್ಲೂ ಅನ್ ಆಲ್ ಫೋರ್ಸ್ ಎಂದು ನಾನು ಹೇಳುತ್ತೇನೆ—ಅದಕ್ಕೂ ಇದಕ್ಕೂ ಹೊಂದಾಣಿಕೆ ಬರುವುದಿಲ್ಲ. ಈಗತಾನೇ ಮಿನಿಸ್ಟರ್ ಅವರ ಸ್ಟೇಟ್‌ಮೆಂಟನ್ನು ಓದಿದೆ. ಅವರು ತಮಗೆ ಈ ವ್ಯಕ್ತಿಯ ಪರಿಚಯ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಮತ್ತೆ ಹೇಗೆ ನಡೆಯಿತು ಎಂದು ಪೋಲೀಸ್ ವರದಿಯೂ ಕೂಡ ಹೇಳಿದ್ದೇನೆ. ನಾನು ಅಂತ್ಯವಾಗಿ

(ಶ್ರೀ ಡಿ. ದೇವರಾಜ್ ಅರಸ್ :)

ಇದಕ್ಕಿಂತ ಹೆಚ್ಚಾಗಿ ಏನೂ ಇಲ್ಲ ಎಂದು ಹೇಳುತ್ತಾ ಇಲ್ಲ. ಹಾಗೆ ಹೇಳುವ ಪರಿಸ್ಥಿತಿಯಲ್ಲಿ ನಾನು ಇಲ್ಲ. ಈಗ ಹಾಗೆಂದ ಮಾತ್ರಕ್ಕೆ ಸಂಬಂಧಪಟ್ಟಿರತಕ್ಕಂಥ ಮಂತ್ರಿಗಳವರದ್ದು ಮಾರಲ್ ಟರ್ಪಿಟ್ಯೂಡ್ ಅಂದರೆ ಯಾವುದಾದರೂ ಒಂದು ರೀತಿಯ ಅಸಭ್ಯ ವರ್ತನೆ ನಡೆದಿದೆ ಎಂದು ಹೇಳುವುದಕ್ಕೂ ಕೂಡ ಯಾವ ಆಧಾರವು ಇಷ್ಟರಿದಲೇ ನಮ್ಮ ಮುಂದೆ ಇಲ್ಲ. ಎಲ್ಲಿಯವರೆಗೆ ಏನು ಸರಿಯಾದಂಥ ಆಧಾರವು ಇಲ್ಲವೋ ಅಲ್ಲಿಯವರೆಗೆ ಸಂಬಂಧಪಟ್ಟ ವ್ಯಕ್ತಿ ಅವರು ನಿರಪರಾಧಿ ಅಂತಲೇ ನಾವು ಭಾವಿಸಬೇಕು. ಇದು ನೀತಿ, ನ್ಯಾಯ, ಧರ್ಮಕ್ಕೆ ಸಂಬಂಧಪಟ್ಟ ವಿಚಾರ. ಹಾಗಿದ್ದರೂ ಮತ್ತೆ ಏತಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಮತ್ತೆ ನಾವು ಅದನ್ನು ಏತಕ್ಕೆ ಒಪ್ಪುತ್ತಿದ್ದೇವೆ ಎನ್ನತಕ್ಕ ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ನಿರಪರಾಧಿ ಎಂದು ಇಲ್ಲಿಯವರೆಗೆ ಸಾಬೀತು ಮಾಡಿಕೊಂಡಿದ್ದಾರೆ. ನಿರಪರಾಧಿ ಅಲ್ಲ, ಅಪರಾಧಿ ಎಂದು ತೀರ್ಮಾನವಾಗುವುದಕ್ಕಿಂತ ಮುಂಚಿತವಾಗಿ ಇವರು ರಾಜಿನಾಮೆ ಕೊಡಬೇಕಾದುದು ಏನು ಇದೆ ಅಥವಾ ನಾವು ಒಪ್ಪಬೇಕಾದುದೂ ಏನು ಇದೆ ಎಂಬತಕ್ಕ ಪ್ರಶ್ನೆಗಳು ಏಳುತ್ತವೆ. ಈಗ ನಾಲ್ಕಾರು ದಿವಸಗಳಿಂದ ಪತ್ರಿಕೆಯಲ್ಲಿ ಬಂದಂಥ ಈ ವರದಿಯನ್ನು ನೋಡಿರತಕ್ಕಂಥಾದ್ದು ಗೊತ್ತಿದೆ. ವರದಿ ಬಂತು, ನಾನಾ ರೀತಿಯಲ್ಲಿ ಹೀಗೆ ನಡೆಯಿತು ಹಾಗೆ ನಡೆಯಿತು ಎಂದು ಮತ್ತು ನಮ್ಮ ಅಸೆಂಬ್ಲಿಯಲ್ಲೂ ಕೂಡ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಇದು ಅನೇಕ ಊಹಾಪೋಹಗಳಿಗೆ ಎಡೆ ಕೊಟ್ಟಿದೆ. ಏನೇನು ತಿಳಿಯಬೇಕೋ ಅವುಗಳೆಲ್ಲವನ್ನೂ ಮಾನ್ಯ ಸದಸ್ಯರೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ಇಷ್ಟೆಲ್ಲಾ ಪ್ರಸ್ತಾಪ ನಡೆದು ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆಗಳಾಗಿ, ಪಬ್ಲಿಸಿಟಿ ಬಂದಾಗ ದೇಶದಲ್ಲೂ ಕೂಡ ಒಂದು ರೀತಿಯಾದ ಏನೋ ಒಂದು ಅಚಾತುರ್ಯ ಇರಬಹುದು ಎನ್ನತಕ್ಕ ಒಂದು ಅನುಮಾನ ಸ್ವಾಭಾವಿಕವಾಗಿ ಬರುತ್ತದೆ ಏನಾದರೂ ಅನುಮಾನ ಪಟ್ಟಿದ್ದರೆ ಅವರೆಲ್ಲಾ ದುರುದ್ದೇಶದಿಂದ ಅನುಮಾನಪಡುತ್ತಾರೆ ಎಂದು ಹೇಳುವುದು ಸರಿಯಾದುದೇನೂ ಅಲ್ಲ. ಇಂಥ ಸಂದರ್ಭಗಳಲ್ಲಿ ಅನುಮಾನ ಬಂದೇ ಬರುತ್ತದೆ. ಈ ರೀತಿಯಾಗಿ ಇಡೀ ವಾತಾವರಣವೆಲ್ಲ ಒಂದು ಅನುಮಾನದಿಂದ ಕೂಡಿರತಕ್ಕ ಸನ್ನಿವೇಶದಲ್ಲಿ, ಮಾನ್ಯ ಸದಸ್ಯರಿಗೆ ಕೂಡ ಒಂದು ಅನುಮಾನ ಬಂದಿರತಕ್ಕ ಸಂದರ್ಭದಲ್ಲಿ ಈ ಅನುಮಾನವನ್ನು ಹೋಗಲಾಡಿಸತಕ್ಕದ್ದು ಹೇಗೆ ? ಇದನು ಹೋಗಲಾಡಿಸಬೇಕಾದರೆ ಪೂರ್ಣವಾಗಿ ತನಿಖೆ ಮುಂದುವರಿಸಿ, ಎನ್‌ಕ್ವೈರಿ ಮಾಡಿ ಇದು ಏನು ಎಂದು ಇದರ ಸತ್ಯಾಸತ್ಯತೆಗಳನ್ನು ಕಂಡು ಹಿಡಿಯುತ್ತೇವೆ. ಅಲ್ಲಿಯವರೆಗೂ ಹೀಗೆಯೇ ಇರುವುದು, ಹೀಗೆಯೇ ಬಿಟ್ಟುಕೊಂಡಿರುವುದು ಯೋಗ್ಯವಲ್ಲ, ಅಲ್ಲಿಯವರೆಗೂ ಅವರು ಈ ಸ್ಥಾನದಲ್ಲಿ ಇರುವುದರಿಂದ ಬೇರೆಯವರ ಅಭಿಪ್ರಾಯದಲ್ಲಿ ಏನು ತಿಳಿಯುತ್ತಾರೆಯೋ ಏನೋ, ಒಂದು ಸ್ಥಾನಕ್ಕೆ ಅಂಟಿಕೊಂಡು ಕುಳಿತು

ಕೊಂಡಿದ್ದಾರೆ. ಇದನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಥವಾ ಅದನ್ನೆಲ್ಲ ಮುಚ್ಚುವುದಕ್ಕೆ ಅವರು, ಸರ್ಕಾರ, ಮುಖ್ಯಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ. ಎನ್ನತಕ್ಕ ಊಹಾಪೋಹಗಳಿಗೆ ಸಾಕಷ್ಟು ಎಡೆ ಕೊಡುತ್ತದೆ. ಆ ಕಾರಣದಿಂದ ಮಂತ್ರಿಗಳು ಕೂಡ ಈ ವಿಷಯಗಳನ್ನೆಲ್ಲ ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡೇ ಅವರ ರಾಜಿನಾಮೆ ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಮತ್ತೊಂದು ಏನು ಹೇಳಿದ್ದಾರೆಂದರೆ, ಕೊನೆಯದಾಗಿ ಇದರ ಬಗ್ಗೆ ಪೂರ್ಣವಾಗಿ ವಿಚಾರಣೆ ನಡೆಸಿ, ಎನ್‌ಕ್ವೈರಿ ಮಾಡಿಸಿ, ಎನ್‌ಕ್ವೈರಿಯಲ್ಲಿ 'ಏನು ಹೊರಬರುತ್ತದೆ. ಆ ನಿಜಾಂಶವನ್ನು ಹೊರಗೆಡಹಿ ಜನಗಳಿಗೂ ನಮಗೂ ಗೊತ್ತಾಗುವಂತೆ ಮಾಡತಕ್ಕದ್ದು ಸೂಕ್ತ ವಿಚಾರಣೆ ಮಾಡುವುದಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನಾನು ಆ ಸ್ಥಾನದಿಂದ ದೂರವಿರುತ್ತೇನೆ, ಸ್ಥಾನವನ್ನು ಬಿಡುತ್ತೇನೆ ಎಂದು ಹೇಳಿದ್ದಾರೆ. ಅದೇ ರೀತಿ ನಾನಾದರೂ ರಾಜಿನಾಮೆಯನ್ನು ಒಪ್ಪುವುದಕ್ಕೆ ಕಾರಣ, ನನ್ನ ಮನಸ್ಸಿಗೆ, ನಾನು ಮೊದಲೇ ಹೇಳಿದ ಹಾಗೆ, ಮತ್ತೆ ಮತ್ತೆ ಸ್ಪಷ್ಟಪಡಿಸಿ ಹೇಳುತ್ತಿದ್ದೇನೆ, ಶ್ರೀಮಾನ್ ಕಿತ್ತೂರ ಅವರು ಯಾವುದೋ ದೊಡ್ಡ ತಪ್ಪನ್ನು ಮಾಡಿದ್ದಾರೆ, ಆ ತಪ್ಪು ಮಾಡಿದ್ದರಿಂದ ಅವರು ರಾಜನಾಮೆಯನ್ನು ಒಪ್ಪಿ ಅವರನ್ನು ಕಳುಹಿಸಲೇಬೇಕು ಎನ್ನುವ ಉದ್ದೇಶದಿಂದ ನಾನು ರಾಜಿನಾಮೆಯನ್ನು ಒಪ್ಪುತ್ತಿಲ್ಲ. ಅವರು ಎಲ್ಲಿಯವರೆಗೆ ಖಚಿತವಾಗಿ ಅಪರಾಧಿಯಾಗತಕ್ಕ ಕೆಲಸ ಮಾಡಿದ್ದಾರೆ ಎಂದು ನಾವು ತಿಳಿಯುತ್ತೇವೆ, ಅಲ್ಲಿಯವರೆಗೂ ಅವರು ನಿರಪರಾಧಿ. ಹಾಗಾದರೆ ನಾನು ಏಕೆ ಅವರ ರಾಜಿನಾಮೆಯನ್ನು ಒಪ್ಪುತ್ತಿದ್ದೇನೆಂದರೆ ಇಂಗ್ಲೀಷಿನಲ್ಲಿ ಹೇಳಿರುವಂತೆ, ಸೀಸರ್ಸ್ ವೈಫ್ ಮಸ್ಟ್ ಬಿ ಎಬ್‌ ಬೋರ್ಡ್. ಈ ರೀತಿಯ ಅನುಮಾನಗಳಿರುವಾಗ ನಾವು ಇದಕ್ಕೆ ಒಂದು ವಿರಾಮ ಕೊಡತಕ್ಕದ್ದು ಒಳ್ಳೆಯದು. ನಾವು ಇದನ್ನು ಒಪ್ಪುವುದರಿಂದ ನಮ್ಮ ಮೇಲೂ ಏನಾದರೂ ದೂರು ಮತ್ತೊಂದು ಬರಬಹುದು. ಸರ್ಕಾರದವರು ಇದನ್ನೆಲ್ಲ ಷೀಲ್ಡ್ ಮಾಡುವುದಕ್ಕೆ, ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಬರಬಹುದು. ಹಾಗೆ ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿಲ್ಲವೆನ್ನುವುದಕ್ಕೆ ಅವರ ರಾಜಿನಾಮೆಯನ್ನು ಒಪ್ಪಬೇಕು. ಎಂದು ತಿಳಿದು ರಾಜ್ಯಪಾಲರಿಗೆ ನನ್ನ ಶಿಫಾರಸ್ಸನ್ನು ಕಳುಹಿಸಿಕೊಟ್ಟಿದ್ದೇನೆ

ಶ್ರೀಮಾನ್ ಕಿತ್ತೂರ್ ಅವರು ಯುವಕರು, ಯೋಗ್ಯರು ಎಂದು ನನ್ನ ಭಾವನೆ ಮತ್ತು ರಾಜಕೀಯಕ್ಕೆ ಹೊಸದಾಗಿ ಬಂದಿರತಕ್ಕವರು. ಆದರೂ ಅವರಿಗೆ ನಾವು ಒಂದು ಜವಾಬ್ದಾರಿಯನ್ನು ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಹೊಸದಾಗಿ ಬಂದಾಗಲೇ ಅವಕಾಶ ಮಾಡಿಕೊಟ್ಟಿದ್ದೆವು, ಅದನ್ನು ಅವರು ಚೆನ್ನಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ ಎಂದು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಅವರ ಯೋಗ್ಯತೆಗನುಸಾರವಾಗಿ ಕೆಲಸವನ್ನು ಮಾಡಿದ್ದಾರೆ. ಈಗ ನನ್ನ ಮನಸ್ಸಿಗೆ ಒಂದು ರೀತಿಯಾದ ವ್ಯಥೆ ಇದೆ.

(ಶ್ರೀ ಡಿ. ದೇವರಾಜ್ ಅರಸ್)

ಒಂದೊಂದು ಸಂದರ್ಭದಲ್ಲಿ ರಾಜಕೀಯದಲ್ಲಿ ಕೆಲಸ ಮಾಡುವಾಗ—ಷೇಕ್ಸ್‌ಪಿಯರನ ನಾಟಕಗಳು ಜ್ಞಾಪಕಕ್ಕೆ ಬರುತ್ತವೆ. ಟ್ರಾಜೆಡಿ ನಾಟಕಗಳಲ್ಲಿ, ಅದನ್ನು ಓದಿದವರಿಗೆ ಗೊತ್ತಿದೆ, ಒಥೆಲೋ, ಹ್ಯಾಮ್ಲೆಟ್, ಕಿಂಗ್‌ಲೀಯರ್ ಇವುಗಳಲ್ಲಿ ಏನು ಬರುತ್ತದೆ ಎಂದರೆ ಮುಖ್ಯ ಪಾತ್ರಧಾರಿಯಾಗಿ ಯಾರಿದ್ದಾರೆ ನಾಯಕ ಅಥವಾ ನಾಯಕಿ, ಒಥೆಲೋ ನಾಟಕದಲ್ಲಿ ನಾಯಕಿಯಾದ ಡೆಸ್ಡಿಮೋನ ಕೊಲೆ ಏಕೆ ಆಯಿತು? ಆಕೆ ಏನು ಅಪರಾಧ ಮಾಡಿದ್ದಳು ಎನ್ನುವುದು ಆ ನಾಟಕ ಓದಿರುವರಿಗೆಲ್ಲ ಗೊತ್ತಿದೆ. ಯಾರು ಎಷ್ಟೇ ಪ್ರಯತ್ನ ಮಾಡಿದರೂ ನೂಲೆಳೆಯಷ್ಟು ಗಾತ್ರದ ಅಪರಾಧವನ್ನೂ ಕಂಡು ಹಿಡಿಯುವುದಕ್ಕಾಗುವುದಿಲ್ಲ. ಹಾಗಾದರೂ ಆಕೆ ತನ್ನ ಗಂಡನಿಂದಲೇ ತನ್ನ ಕತ್ತು ಹಿಸುಕಿಸಿಕೊಂಡು ಸಾಯುವುದಕ್ಕೆ ಅವಕಾಶವಾಯಿತು. ಆಕೆಯದು ಏನೇನೂ ಅಪರಾಧವಿಲ್ಲ ನನ್ನ ದೃಷ್ಟಿಯಲ್ಲಿ. ಇನ್ನೂ ದೊಡ್ಡ ದೊಡ್ಡ ಕ್ರಿಟಿಕ್ಸ್ ದೃಷ್ಟಿಯಲ್ಲಿ ಕೂಡಾ ಹಾಗೆಯೇ ಇರಬಹುದು. ಷೇಕ್ಸ್‌ಪಿಯರ್ ನಾಟಕದಲ್ಲಿನ ದೊಡ್ಡ ವಿಚಾರವೇನೆಂದರೆ "ಕ್ಯಾರೆಕ್ಟರ್ ಈಸ್ ಮ್ಯಾನ್ಸ್ ಫೇಟ್....ಮನುಷ್ಯನ ಅದೃಷ್ಟ ಅವನ ಗುಣದಿಂದಲೇ ಎಂದು. ಗುಣ ಎಂದರೆ ಅದು ಒಳ್ಳೆಯದಿರಬಹುದು, ಕೆಟ್ಟದ್ದಿರಬಹುದು. ಮುಗ್ಧತೆ (ಇನ್ನೊಸೆನ್ಸ್) ಎನ್ನುವುದು ಒಂದು ಗುಣ. ಮುಗ್ಧತೆ ಎನ್ನುವುದು ಒಳ್ಳೆಯ ಗುಣವೋ, ಕೆಟ್ಟ ಗುಣವೋ ಎಂದು ಸಾರ್ವತ್ರಿಕವಾಗಿ ಕೇಳಿ ನೋಡಿದಾಗ ಮುಗ್ಧತೆ ಕೆಟ್ಟ ಗುಣ ಎಂದು ಹೇಳುವುದಿಲ್ಲ, ಒಳ್ಳೆಯ ಗುಣದಲ್ಲಿ ಅದು ಸೇರುತ್ತದೆ. ಜನರಾಸಿಟಿ ಒಳ್ಳೆಯ ಗುಣ. ಆದರೂ ಮನುಷ್ಯ ಅನೇಕ ವೇಳೆ ಇಂಥ ಸುಳಿಗೆ ಸಿಕ್ಕಿ ಅದರಿಂದ ನೋವನ್ನು ಅನುಭವಿಸಬೇಕಾಗಿ ಬರುತ್ತದೆ. ಮುಗ್ಧತೆಯಿಂದ, ಜನರಾಸಿಟಿಯಿಂದ ಜನರು ದೊಡ್ಡ ದೊಡ್ಡ ಗಂಡಾಂತರಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. 'ಜನರಸ್ ಟು ಎ ಫಾಲ್ಟ್, ಎನ್ನುವ ಹಾಗೆ, ವಿಪರೀತವಾಗಿ ಒಂದು ಗುಣ ಮನುಷ್ಯನಲ್ಲಿ ಇದ್ದರೆ ಅದೇ ಅವನ ಅವನತಿಗೆ, ತೊಂದರೆಗೆ ಈಡಾಗುವುದಕ್ಕೆ ಕಾರಣವಾಗಿದೆ ಎನ್ನುವುದು ಅದರಿಂದ ಗೊತ್ತಾಗುತ್ತದೆ. ಅದೇ ರೀತಿ ನಾವು ನಡೆದಿರುವ ಹಾಗೆ ವಿಚಾರ ತೆಗೆದುಕೊಳ್ಳೋಣ. ಯಾರೋ ಒಬ್ಬರು ಮನೆಗೆ ಬಂದಿದ್ದಾರೆ, ಕೆಲವು ವಿಚಾರಗಳಲ್ಲಿ ಮಾತನಾಡುವಾಗ ಅವರು ಮಾತನಾಡಿದ ರೀತಿ ಸರಿಯಿಲ್ಲ ಎಂದು ಅವರನ್ನು ಕಳುಹಿಸಿದರು. ಅವರ ಜೊತೆಗೆ ಅವರ ಪರ್ಸನಲ್ ಅಸಿಸ್ಟೆಂಟನ್ನು ಕಳುಹಿಸಿಕೊಟ್ಟರು. ಆವರನ್ನು ಬಿಟ್ಟು ಬಂದರು. ಬೆಳಿಗ್ಗೆ ಎದ್ದು ಅವರು ಎಲ್ಲೋ ಹೋಗಿದ್ದಾರೆ. ಇಷ್ಟು ಮಾತ್ರದಿಂದಲೇ ಯಾರಿಗಾದರೂ ಅನ್ನಿಸುತ್ತದೆ, ನನಗೊಬ್ಬನಿಗೇ ಅಲ್ಲ, ಇದರಿಂದ ಏನು ಅಪರಾಧವಾಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಕೆಲವು ಊಹಾಪೋಹಗಳಿಗೆ ಎಡೆ ಕೊಡುವುದು, ಹೀಗಿರಬಹುದೋ ಏನೋ, ಹಾಗಿರಬಹುದೋ ಏನೊ ಎಂದು ಊಹೆ ಮಾಡಿಕೊಂಡು ಹೋಗುವುದು, ಖಚಿತವಾಗಿ ಹೀಗೆಯೇ ಸರಿ ಎಂದು ಹೇಳುವುದು ಕಷ್ಟ

ವಾಗುತ್ತದೆ. ಅದಕ್ಕೆ ನಾನು ವಿಚಾರಣೆಯಾಗಿ, ಸತ್ಯಾಂಶ ಹೊರಬೀಳುವ ವರೆಗೂ ಅವರು ಇನ್ನೊಸೆಂಟ್. ಈ ಸಂದರ್ಭದಲ್ಲಿ ಒಂದು ರೀತಿಯಲ್ಲಿ ನಾನು ಶ್ರೀ ಕಿತ್ತೂರರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ ಎಂದರೂ ಕೂಡ ತಪ್ಪಾಗ ಲಾರದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಪ್ರೇರಣೆಯಿಂದ ರಾಜಿನಾಮೆ ಕೊಡಲಿಲ್ಲ, ತಮ್ಮಂಥವರ ಒತ್ತಾಯದಿಂದ ಕೊಟ್ಟಿದ್ದಾರೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ನೀವು ತ್ರಿಕಾಲಜ್ಞಾನಿಗಳಾಗಿದ್ದೀರಿ. ಎಲ್ಲರ ಮನಸ್ಸನ್ನೂ ಹೊಕ್ಕು ಹೇಳುತ್ತೀರಿ. ಇದು ಸೌಜನ್ಯವಾದ ಮಾತಲ್ಲ.

ಮತ್ತೆ ಇನ್ನೊಂದು ವಿಚಾರವೇನೆಂದರೆ, ಇದರ ಬಗ್ಗೆ ಯಾರೂ ಕೂಡಾ ಎಲ್ಲಿಯೂ ಕಂಪ್ಲೇಂಟ್ ಕೊಟ್ಟಿಲ್ಲ, ಆಕೆಯೂ ಯಾರ ಮೇಲೆಯೂ ಎಲ್ಲಿಯೂ ಕಂಪ್ಲೇಂಟ್ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾಡುವುದಕ್ಕೆ ಅವಕಾಶವಿದ್ದರೆ ತಾನೆ.

ಶ್ರೀ ಡಿ. ದೇವರಾಜ ಅರಸ್.—ಊಹಾ ಪ್ರಪಂಚದಲ್ಲಿರುವವರು ಏನು ಬೇಕಾದರೂ ಮಾತನಾಡಿಕೊಳ್ಳಬಹುದು.

4-30 P.M.

ಶ್ರೀ ವಾಟಾಳ್ ನಾಗರಾಜ್ :—(ಚಾಮರಾಜಪೇಟೆ)

ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ತೆಗೆದುಕೊಂಡಿರುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಒಂದು ದಿಟ್ಟ ವಾದ ನಿಲುವನ್ನು ಇದರ ಬಗ್ಗೆ ಅವರು ತೆಗೆದುಕೊಂಡಿದ್ದಾರೆ, ನಾಲ್ಕು ದಿನ ಗಳಿಂದಲೂ ನಾವು ಒತ್ತಾಯ ಮಾಡಿದನಂತರ ಅವರು ಇಂತಹ ಒಂದು ನಿಲು ವನ್ನು ತೆಗೆದುಕೊಂಡಿದ್ದಾರೆ. ಹಿಂದೆ ಇದೇ ರಾಜ್ಯದಲ್ಲಿ ಶ್ರೀ ಹನುಮಂತಯ್ಯ ನವರು ಮುಖ್ಯ ಮಂತ್ರಿಗಳಾಗಿದ್ದಾಗ ಶ್ರೀ ಟಿ. ಸಿದ್ದಲಿಂಗಯ್ಯನವರ ಪ್ರಕರಣ ನಡೆದು ಆಗ ಶ್ರೀ ಸಿದ್ದಲಿಂಗಯ್ಯನವರು ರಾಜೀನಾಮೆ ಕೊಟ್ಟರು. ಇದಾದ ನಂತರ ಇಂದು ನಡೆದಿರುವ ಇಪ್ಪತ್ತೈದು ವರ್ಷಗಳ ಇತಿಹಾಸದಲ್ಲಿ ಇಂತಹ ಒಂದು ಸ್ವಾಗತಾರ್ಹವಾದ ನಿರ್ಣಯವನ್ನು ಮಾಡಿರತಕ್ಕದ್ದು ಇದೇ ಮೊದಲು. ಇದರ ಬಗ್ಗೆ ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರ ಬೇಕಾಗಿದೆ. ಮುಖ್ಯವಾಗಿ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದಾರೆ. ಇದರಲ್ಲಿ ಯಾವ ಅನುಮಾನವೂ ನಮಗೆ ಇಲ್ಲ. ಆದರೆ ನಾವು ಸಲಹೆ ಮಾಡುವುದು ತನಿಖೆ ಮಾಡುವಾಗ ಇದು ನ್ಯಾಯಾಂಗ ತನಿಖೆಯಾಗಬೇಕು. ಇದಕ್ಕಾಗಿ ಒಂದು

(ಶ್ರೀ ಪಾಟಾಳ್ ನಾಗರಾಜ್)

ಜುಡಿಷಿಯಲ್ ಎನ್‌ಕ್ವೈಯರಿಯಾಗಬೇಕೆಂದು ಸಲಹೆ ಮಾಡುತ್ತೇನೆ. ಇದರಲ್ಲಿ ನಾವು ಯಾರ ಪ್ರಭಾವಕ್ಕೂ ಈಡಾಗುವುದಿಲ್ಲ ಎನ್ನುವುದನ್ನು ಅವರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಜುಡಿಷಿಯಲ್ ಎನ್‌ಕ್ವೈರಿ ಎಂದು ಮಾಡಿದರೆ ಬಹುಶಃ ನನಗನಿಸುವುದು ಇದರಲ್ಲಿ ಅನೇಕ ಸತ್ಯಾಂಶಗಳು ಹೊರಬೀಳತಕ್ಕ ಸಂದರ್ಭಗಳು ಬರುತ್ತದೆ. ಇದಕ್ಕಾಗಿ ನಾನು ಸರಕಾರದಲ್ಲಿ ಸಲಹೆ ಮಾಡುವುದು ಒಬ್ಬರು ನಿವೃತ್ತ ಶ್ರೇಷ್ಠ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಇಲ್ಲವೇ ರಾಜ್ಯದಲ್ಲಿರುವ ಒಬ್ಬ ಶ್ರೇಷ್ಠ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ಜನರಿಗೆ ಇಂದು ಉಂಟಾಗಿರುವ ಅನೇಕ ಅನುಮಾನಗಳು ಪರಿಹಾರವಾಗಲು ಅವಕಾಶವಾಗುತ್ತವೆ. ಇದಕ್ಕಾಗಿ ಒಂದು ಜುಡಿಷಿಯಲ್ ಎನ್‌ಕ್ವೈರಿ ಆಗಲೇಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಹೇಳುವಾಗ ಆಶಾ ನಿಕೇತನದ ಹೆಸರನ್ನೂ ಹೇಳಿದರು. ಇದರಲ್ಲಿ ಮಿಸ್. ಡಿ ಕಾಸ್ಟಾ ಅನ್ನುವವರಿಗೂ ಶ್ರೀಮತಿ ಸುಮಿತ್ರಾ ದೇಸಾಯಿಯವರಿಗೂ ಪರಿಚಯವಿದೆ ಎಂದು ಗೊತ್ತಾಗಿದೆ ಮತ್ತು ಈಗಾಗಲೇ ಎಲ್ಲರಿಗೂ ಗೊತ್ತಿರುವ ಹಾಗೆ ಸುಮಿತ್ರಾ ದೇಸಾಯಿಯವರನ್ನು ಗೋವಾದಲ್ಲಿ ಭೇಟಿ ಮಾಡಿ ಐದು ನಿಮಿಷಗಳ ಕಾಲ ಪರಿಚಯ ಇತ್ತು ಎಂದು ಹೇಳಿದರು. ಇಂತಹವರನ್ನು ಇಲ್ಲಿಗೆ ಬಂದಾಗ ಇವರನ್ನು ಆಶ್ರಮದಲ್ಲಿಟ್ಟುಕೊಳ್ಳಬೇಕಾದ ಪ್ರಮೇಯವಾದರೂ ಏನಿತ್ತು ? ಇದರಿಂದ ಇವರಿಗೆ ಸ್ನೇಹವಿತ್ತು ಎನ್ನುವುದು ಗೊತ್ತಾಗುತ್ತದೆ. ಇದರ ಬಗ್ಗೆ ಸರಿಯಾಗಿ ಪತ್ತೆ ಹಚ್ಚಿ ಸಮಗ್ರವಾದ ತನಿಖೆ ನಡೆಸಬೇಕಾದುದು ಸರಕಾರದ ಕರ್ತವ್ಯ. ಇನ್ನೊಂದು ಮಾತನ್ನು ಇಲ್ಲಿ ತಮ್ಮ ಗಮನಕ್ಕೆ ತರಬೇಕಾಗಿದೆ. ಶ್ರೀಮತಿ ಸುಮಿತ್ರಾ ದೇಸಾಯಿ ಎನ್ನುವವರು ಬೊಂಬಾಯಿಯಲ್ಲಿ ಸಂತಕ್ರೂಜ್‌ನಲ್ಲಿ ಅವರ ಸಂಬಂಧೀಕರ ಮನೆಯಲ್ಲಿದ್ದರು ಎನ್ನುವ ಒಂದು ಅಂಶ ಕೂಡ ಇದರಲ್ಲಿ ಬಂದಿದೆ, ಇದುವರೆಗೂ ಇಲ್ಲಿ ಇವರು ಇಲ್ಲ ಎಂದು ಹೇಳುತ್ತಿದ್ದಾರೆ. ನನಗೆ ಗೊತ್ತಿರುವ ಮಾಹಿತಿಗಳ ಪ್ರಕಾರ ಅವರು ಬೆಂಗಳೂರಿನಲ್ಲೇ ಇದ್ದಾರೆ ಮತ್ತು ಯಾವುದೋ ಜಾಗದಲ್ಲಿ ಮುಚ್ಚಿಟ್ಟಿದ್ದಾರೆ ಎಂದು ನನ್ನ ಭಾವನೆ. ಇದಕ್ಕಾಗಿ ನಾನು ತಮ್ಮ ಮುಂದೆ ಕೆಲವು ಅಂಶಗಳನ್ನು ಇಡಬೇಕಾಗಿದೆ. ಅವರು ಜೀವಂತವಾಗಿದ್ದಾರೋ ಇಲ್ಲವೋ ಅದನ್ನು ಈ ಸಭೆಗೆ ತಿಳಿಸಬೇಕು ಮತ್ತು ಇವರಿಗೇ ಯಾರಾದರೂ ನೆಂಟರಿದ್ದಾರೆಯೋ ? ಇವುಗಳ ಎಲ್ಲ ವಿವರಗಳನ್ನು ತಿಳಿಯಬೇಕಾದರೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಎಂದು ಮಾಡಿದರೆ ಎಲ್ಲ ವಿವರಗಳೂ ಹೊರಬರಲು ಅವಕಾಶವಾಗುತ್ತದೆ. ಅದಕ್ಕಾಗಿ ನಾನು ಕಳಕಳಿಯಿಂದ ಮನವಿಮಾಡಿಕೊಳ್ಳುವುದು ಒಂದು ನ್ಯಾಯಾಂಗ ವಿಚಾರಣೆಯನ್ನು ಇದರಲ್ಲಿ ಮಾಡಲೇಬೇಕು ಎಂದು. ಇನ್ನೊಂದು ವಿಚಾರ ತಮಗೆ ಹೇಳುವುದು ಕೆಲ್ಲ ದಿನಗಳ

ಹಿಂದೆ ಪ್ರಪಂಚ ಎನ್ನುವ ಪತ್ರಿಕೆಯಲ್ಲಿ ಮಹಾರಾಷ್ಟ್ರ ಸರಕಾರದಿಂದ ನಮ್ಮ ರಾಜ್ಯದ ಮಂತ್ರಿಗಳೊಬ್ಬರ ಬಗ್ಗೆ ಈ ಸರಕಾರಕ್ಕೆ ಪತ್ರ ಬಂದಿತ್ತು ಎಂದು ಹೇಳಲಾಗಿತ್ತು. ಅಂತಹ ಲೆಟರೇನಾದರೂ ಈ ಸರಕಾರಕ್ಕೆ ಬಂದಿದೆಯೋ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿರತಕ್ಕ ಎಲ್ಲ ವಿಚಾರವನ್ನು ತಮಗೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಬರೀ ಊಹೆಯಿಂದ ಹೇಳುತ್ತಿರುವ ಸುಳ್ಳು ಮಾತು ಅದು. You are wrongly quoting me.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಮಗೆ ಇದರಲ್ಲಿ ಬಂದಿರತಕ್ಕ ಕೆಲವು ಸಂಶಯಗಳನ್ನು ತಮ್ಮ ಮುಂದೆ ತಿಳಿಸುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕೊಟ್ಟಿರುವ ಹೇಳಿಕೆಯ ಪ್ರಕಾರ ಇದರ ವಿಚಾರಣೆ ಇಲ್ಲಿಗೇ ಮುಕ್ತಾಯವಾಗಲಿಲ್ಲ. ಇದು ಈ ಘಟನೆಯ ಮೊದಲ ಮೆಟ್ಟಲು. ಇದರ ಎಲ್ಲ ಸತ್ಯಾಂಶಗಳನ್ನೂ ತಿಳಿಯಲು ಇದರ ಬಗ್ಗೆ ಪೂರ್ಣವಾಗಿ ವಿಚಾರಣೆ ಮಾಡುವುದು ಅಗತ್ಯ ಎಂದು ಮಾನ್ಯ ಮಂತ್ರಿಗಳೇ ಈಗ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು.—ಎಲ್ಲ ವಿಚಾರಗಳನ್ನೂ ಸರಕಾರದವರು ಈಗಾಗಲೇ ತಮಗೆ ಒದಗಿಸಿ ಕೊಟ್ಟಿದ್ದಾರೆ. ಇದರ ಮೇಲೆ ತಾವು ಮತ್ತೇನು ಹೇಳುವುದಿದೆ?

ಶ್ರೀ ಹೆಚ್. ಡಿ. ದೇವೇಗೌಡ.....ಮಾನ್ಯ ಮುಖ್ಯ ಮಂತ್ರಿಗಳು ಇದರಲ್ಲಿ ಯಾವ ರೀತಿ ಎನ್‌ಕ್ವೈರಿ ಮಾಡುತ್ತಾರೆ ಅದನ್ನು ನಮಗೆ ತಿಳಿಸಿದರೆ ಸಾಕು. ಪೋಲೀಸು ಎನ್‌ಕ್ವೈರಿ ಮಾಡುತ್ತಾರೆಯೋ ಇಲ್ಲವೇ ಬೇರೆ ಯಾವ ರೀತಿ ಎನ್‌ಕ್ವೈರಿ ಮಾಡುತ್ತಾರೆ ಅದನ್ನು ಸಭೆಗೆ ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ನಾನಾಗಲೇ ಹೇಳಿದೆ, ನನಗೆ ಎಲ್ಲ ಮಾಹಿತಿಗಳೂ ಇನ್ನೂ ದೊರೆತಿಲ್ಲ. ಇದಕ್ಕಾಗಿ ಮೊದಲು ಪೋಲೀಸ್ ಎನ್‌ಕ್ವೈರಿ ಮಾಡಿ ಅದರ ವರದಿಯನ್ನು ತರಿಸಿಕೊಂಡು ಅದರಿಂದ ನಮ್ಮ ಮನಸ್ಸಿಗೆ ಯಾವ ಯಾವ ವಿಚಾರಗಳು ತಿಳಿಯುತ್ತವೆ ಅದರ ಮೇಲೆ ಎನ್‌ಕ್ವೈರಿ ಮಾಡಬೇಕಾಗುತ್ತದೆ. ಯಾವ ರೀತಿ ಎನ್‌ಕ್ವೈರಿ ಮಾಡಬೇಕು ಎನ್ನುವುದನ್ನು ನಮಗೆ ಬಿಡಿ. ನಾವು ಎನ್‌ಕ್ವೈರಿ ಮಾಡಿಸುತ್ತೇವೆಂದು ಸ್ಪಷ್ಟವಾಗಿ ಅಲ್ಲಿ ತಿಳಿಸಿದ್ದೇನೆ. ಮಾನ್ಯ ಮಂತ್ರಿಗಳು ರಾಜೀನಾಮೆ ಕೊಟ್ಟಿರುವ ಪತ್ರದಲ್ಲೂ ಎನ್‌ಕ್ವೈರಿ ಮಾಡಬೇಕು ಎನ್ನುವ ಸೂಚನೆಯನ್ನೂ ಕೊಟ್ಟಿದ್ದಾರೆ. ಅವರ ದೃಷ್ಟಿಯಿಂದಲೂ ಇದನ್ನು ಎನ್‌ಕ್ವೈರಿ ಮಾಡಿಸಬೇಕಾಗುತ್ತದೆ. ಆದರೆ ಯಾವ ರೀತಿ ಎನ್‌ಕ್ವೈರಿ ಮಾಡಬೇಕು ಎನ್ನುವುದನ್ನು ಈಗಲೇ ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಶಯ ಇದರಲ್ಲಿ ಬರುವುದಕ್ಕೆ ಕಾರಣ ಪೋಲೀಸರ ಮುಖೇನ ವಿಚಾರಣೆ ನಡೆಸುವುದರಿಂದ ಇದರ ನಿಜವಾದ ಅಂಶ ಹೊರಬರಲಿಕ್ಕೆ ಸಾಧ್ಯವೇ ಇಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಾಗಲೇ ಶ್ರೀಮತಿ ಸಾವಿತ್ರಾ ದೇಸಾಯಿ ಎನ್ನುವವರು ಬೊಂಬಾಯಿಲ್ಲಿದ್ದಾರೆಂದು ತಮಗೆ ಗೊತ್ತಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—We do not know anything except that ಸಂತಾಕ್ರೂಜನಲ್ಲಿ ಅವರ ತಾಯಿ ಮನೆ ಇದೆ ಎಂದು ಹೇಳಿದ್ದಾರೆ. ಮುಂದೆ ನೋಡೋಣ.

ಶ್ರೀ ಕಾಗೋಡು ತಿಮ್ಮಪ.—ಸಾಕಷ್ಟು ವಿಚಾರಗಳು ಇಂದು ಬಂದಿರುವ ಹೇಳಿಕೆಯಲ್ಲಿ ಬಂದಿಲ್ಲ. ತನಿಖೆ ಮಾಡುತ್ತೇವೆಂದು ಮಾತ್ರ ಇದೆ. ಯಾವ ರೀತಿ ತನಿಖೆ ಮಾಡುತ್ತೇವೆ ಎಂದು ಹೇಳಲಿಲ್ಲ, ನಿಮ್ಮ ಕೈ ಕೆಳಗೆ ಇರುವ ಪೋಲೀಸು ಇಲಾಖೆಯವರ ಮೂಲಕ ಇವರೆಲ್ಲಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚಬಹುದಾಗಿತ್ತು, ಇದನ್ನೇಕೆ ಮಾಡಲಿಲ್ಲ? ಇದು ಪೋಲೀಸು ಇಲಾಖೆಯ ಇನ್ ಎಫಿಷಿಯನ್ಸಿ ಅಲ್ಲವೇ ?

SRI D. DEVERAJ URS.—I refute his statement. If he knows anything, let him give information. ಸುಮ್ಮನೆ ಇಲ್ಲಿ ಯಾವ ಯಾವುದನ್ನೂ ಹೇಳುವುದು ಬೇಡ. ಬೆಂಗಳೂರಿನಲ್ಲಿದ್ದಾರೋ ಇಲ್ಲವೇ ಬೇರೆ ಕಡೆಗೆ ಹೋಗಿದ್ದಾರೊ ಅದು ನಮಗೆ ಗೊತ್ತಿಲ್ಲ. ಆದುದರಿಂದ ತಾವು ಇಲ್ಲಿ ಹೇಗೆ ಅವರು ಬಾಂಬೆಗೆ ಹೋಗಿದ್ದಾರೆ, ಇಲ್ಲವೇ ಗೋವಾಕ್ಕೆ ಹೋಗಿದ್ದಾರೆಂದು ಹೇಳುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ನಮಗೆ ಇದು ಗೊತ್ತಿಲ್ಲ. ಆದಕಾಗಿ ತಮ್ಮಲ್ಲಿ ವಿವರಣೆ ಕೇಳುತ್ತಿರುವುದು.

ಶ್ರೀ ಡಿ. ದೇವರಾಜ್ ಅರಸ್.—ತನಿಖೆ ಮಾಡಬೇಕೆಂದರೆ ನಾನು ಮನೆ ಮನೆಗೂ ಹೋಗಿ ಹುಡುಕಲೇನು ?

ಶ್ರೀ ಕಾಗೋಡು ತಿಮ್ಮಪ್ಪ.—ಪೋಲೀಸು ಇಲಾಖೆ ಮೂಲಕ ನೀವು ನೋಡಬಹುದು.

ಶ್ರೀ ಡಿ. ದೇವರಾಜ್ ಅರಸ್.—ಈಗಾಗಲೇ ನಾನು ಎಲ್ಲ ವಿವರಗಳನ್ನೂ ಹೇಳಿದ್ದೇನೆ.

I appeal that there is no point in discussing these matters like this. I have categorically stated that we are taking vigours steps.

ಶ್ರೀ ಕಾಗೋಡು ತಿಮ್ಮಪ್ಪ.—ಈ ಹೆಣ್ಣುಮಗಳನ್ನು ಬೆಂಗಳೂರಿಗೆ ತರಬೇಕಾದರೆ ಇದರ ಹಿನ್ನೆಲೆ ಏನಿತ್ತು? ಇದುವರೆಗೂ ಈ ಹೆಣ್ಣುಮಗಳು ಎಲ್ಲಿದ್ದಾರೆನ್ನುವುದನ್ನು ಪತ್ತೆ ಹಚ್ಚಲಾಗಲಿಲ್ಲ, ಇಷ್ಟರೊಳಗೆ ಪತ್ತೆ ಮಾಡಬಹುದಾಗಿತ್ತು. ಇಂತಹ ಹೆಣ್ಣು ಮಗಳನ್ನು ಆಶ್ರಮಕ್ಕೆ ಏಕೆ ಕಳುಹಿಸಬೇಕಾಗಿತ್ತು?

SRI D. DEVERAJ ARS.—I do not like this. Is it cross-examining? I again sav that you leave it at that.

ಶ್ರೀ ಕಾಗೋಡು ತಿಮ್ಮಪ್ಪ :—ನಾನೇಕೆ ಇದರ ಬಗ್ಗೆ ಹೇಳುತ್ತೇನೆ ಎಂದರೆ ಇದರ ಬಗ್ಗೆ ಕೂಲಂಕಷವಾಗಿ ಒಂದು ನ್ಯಾಯಾಂಗ ವಿಚಾರಣೆ ಮಾಡಲೇಬೇಕು.

ಅಧ್ಯಕ್ಷರು :— ನಿಮಗೋಸ್ಕರ ಅಲ್ಲದಿದ್ದರೂ ಅವರಿಗೋಸ್ಕರವಾದರೂ ತನಿಖೆ ಮಾಡಿಸಲೇಬೇಕು.

SRI C. M. ARMUGHAM.—Madam Speaker, I want to submit one point. From the statement made by the Chief Minister it appears to me that Sri Kittoor is innocent and he is not involved in this affair. If that is so, why did he resign? That is the point over which we have to consider. If it going to be enquired by the Police, why did not the police take any written statement either from the Minister or the girl?

When a Minister makes a complaint to the police that a girl from Bombay has come and she should be removed, the police ought to have enquired who she was, how she came to Bangalore and then they should have sent her back to Bombay, her home town. These are the two points which the Hon. Chief Minister should consider.

The third point is it will become impossible for a politician who had lot of political enemies to survive in any post or appointment even as a Minister. If Mr. Kittoor is proved innocent then what is the alternative? Then is it a plot against him?

SRI D. DEVARAJ URS :—I may tell the House that I am as much interested as anybodyelse and I am also equally pained to accept the resignation of the person whose guilt is not yet proved. But I have explained the reasons and the circumstances under which I have accepted his resignation. But let me assure the House and the hon. Member Sri Arumugham that I am also very much interested to find out the verocity of reports and the propoganda that has been going on about this matter. I want to put an end to this. I am not going to sleep over the matter because I am primarily interested in that young gentleman not merely because he belongs to my party but because he has come to politics for the first time and it is not proper on the part of anybody to ruin the character of a young gentleman because of some political bias or prejudice. That is why, I am also equally keen and anxious to protect that young gentleman. Therefore, I said a virgorous enquiry will be made and I will not keep quiet till the truth of the matter is brought out.

SRI C. M. ARMUGHAM.—Therefore, Madam Speaker, if it is a plot his career is ruined. Already there were some demonstrations against him that he should be removed. But this has happened. To me when this question was raised I thought and I believed that he would have involved in this episode. But after hearing the statement there is no fact at all. But then how is it he has resigned? We have no other documents except to believe the papers. From the papers I could see that Member of the House was sent to advise Mr. Kittoor to resign. Of course, nobody refuted that press report. Therefore is he involved in this episode or is it a plot? If it is a plot it is impossible for a man to survive who has got enemies in politics. Even Mahatma Gandhiji, Madam Speaker, had an enemy not to wound him but to shoot him to death. That is the position of the contry wherein we are living. Therefore tomorrow anybody say a lady may come to somebody's house and

it may appear in the press that so and so, a good looking girl, with curly hairs and a fine nose....

SRI D. DEVARAJ URS —Such a thing has happened in this country in some other connection.

SRI C. M. ARUMUGHAM.—Therefore, Madam the man who is responsible for this political assasination should be hauled up otherewise, there would be nobody worth the name in politics and in public life. Then a word about press I would like to say. I have been seeing so many journals and weeklies. They give so much of news. Particularly the weeklies gives so many news items. Every week they say that Mr. Devaraj Urs Government will be toppled down or Mr. Channabasappa, or Mr. Azeez Sait or Mr. Basavalingappa will to be toppled down. They write so much and you are keeping quiet. What appears in the Press must be immediately attended to. But you are not doing it. But when a news appears like Deccan Herald, Indian Express, Prajavani, Hindu, etc, it has got some weight and immportance and immediately it should be acted upon. But that is not being done. This incidence has created lot of rumours, lot of news for the entire State and the Country and today you were the come and say he is innocent and has been asked to resign or somebody is sent to advise him to resign, it is not very correct. We are also not very happy about it. But I must compliment Mr. Kittoor for the very fact that the matter was raised in the Legislature and it appeared in the Press he has sent in in his resignation. But according to me he is innocent. He is an honourable man. But he has resigned saying that he is innocent asking for an enquiry. This is also a matter which needs immediate considera-tion. Now, finally I want to submit to you and to the House that mere police enquiry will not help the matter to be solved because the police are also party to it and they have not done their. duty. I don't know when a Minister reports to the police to take away the girl and it also appears in the press on the following day

(SRI C. M. ARUMUGHAM)

it is the duty of the Commissioner of Police who is sitting at Bangalore to inform the Chief Minister of the incident. But he has not done it. The Chief Minister having lot of work, bundles of ideas and filed alongwith other party affairs is very busy otherwise. The Chief Minister has been deprived of making the Statement on the very first day to this House. Therefore I submit that since you have dropped your colleague, a Minister who was working under you and you have complimented him for his service, you know him better than anybody else. When this matter was not informed to you then what about the fate of common man? He has resigned even without the motive and facts being proved. He has resigned just because it appeared in the press and the matter was raised in the Legislature. But the matter does not end there. We must go further into this episode and find how many more are involved in this. To find this out it is not sufficient if police are asked to enquire. We have been seeing that the police mentality has not changed. They have not yet become commoners. But when people go to police station they are kept under lock-up for days and weeks together. There are a number of such cases.

Therefore, I submit through you Madam Speaker, to the Government that there must be a judicial enquiry in regard to this issue. When the Hon'ble Chief Minister can afford to lose his colleague, there is no need for him to protect the Commissioner or the Deputy Commissioner of Police. It is a dot on the Cabinet of Sri Devaraj Urs. It is a matter touching the moral terpitude. The issue has embarrased the Chief Minister and caused inconvenience. Therefore, to clear all the doubts, there should be a judicial probe in the matter.

ಶ್ರೀ ಡಿ. ದೇವರಾಜ್ ಅರಸ್ :—ನಾನು 5 ಗಂಟೆಗೆ ಇನ್ನೊಂದು ಮನೆಗೆ ಹೋಗಬೇಕು. ಆದ್ದರಿಂದ I cannot be here for more than 5 to 6 minutes. As I have already said and my friend Sri

Arumugham put it, so many things come to my notice. But, I cannot disclose every thing. Even in this matter certain things have come to my notice. As I have already said, those are all matters which cannot be disclosed at this stage, because they are all yet hear-say. I have been trying my best to probe into it, get the persons to have their say and find out what exactly it is. I am at it and I would not get contented till I come to know to my satisfaction what the truth is. But, there is one point which I must mention, *viz.*, that there is a tendency on the part of some of our members too, who are gullible and who are prone to believe anything and every thing that is said on the earth. particularly about Ministers. There is one set of people who go on talking truth, untruth, good, bad and indifferent. There is another set of people who are prone to believe the atmosphere that is surcharged more because such irresponsible talks are a float in the air. That is why I thought that immediately there is no other way out to clear the atmosphere of doubt, except by way of accepting the resignation. I am not going to keep silent about this matter; I want to probe into the whole thing.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿ ನನಗೆ ಸಂತೋಷವಾಯಿತು ಅವರು ಹೇಳಿದ ವಿಷಯದ ಬಗ್ಗೆ ನಾನು ಹೇಳುವುದಿಲ್ಲ. ಬೇರೆ ಒಂದೆರಡು ವಿಷಯಗಳನ್ನು ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು —ಮುಖ್ಯ ಮಂತ್ರಿಗಳು ಹೇಳಿದ ವಿಷಯದ ಮೇಲೆ ಮತ್ತೆ ಚರ್ಚೆ ಆಗಬೇಕು ಎಂದು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದರು. ಅದರ ಬಗ್ಗೆ ನಮಗೆ ಸಂದೇಹ ಬರುವಂತಹ ಅಂಶಗಳನ್ನು ಅವರ ಗಮನಕ್ಕೆ ತರಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ದಿಟ್ಟವಾದ ಹೆಜ್ಜೆಯನ್ನು ಇಟ್ಟಿದ್ದಾರೆ. ನನಗೆ ಸಂತೋಷವಾಗುತ್ತದೆ. ಶ್ರೀಮಾನ್ ಕಿತ್ತೂರ್ ಅವರ ರಾಜೀನಾಮೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಕ್ಕಾಗಿ ಅವರು ಅಭಿನಂದಾರ್ಹರು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಎಷ್ಟೋ ಊಹಾಪೋಹಗಳು ಬರುತ್ತವೆ. ಮಂತ್ರಿ

(ಶ್ರೀ ಎಂ. ಎಸ್. ಕೃಷ್ಣನ್)

ಗಳಾಗಲೀ, ರಾಜಕಾರಿಣಿಗಳಾಗಲೀ ಅಂಥವರ ಮೇಲೆ ಜನರು ಅಪಾದನೆಗಳನ್ನು ಹೊರಿಸುವುದು ಉಂಟು. ಅವು ನಿಜ ಆದರೆ ಅನೇಕ ಜನ ಮಾನ್ಯ ಸದಸ್ಯರು ಈ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಮಂತ್ರಿಗಳೂ ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಕೈಗೊಂಡ ಕ್ರಮ ಏನಿದೆ ಅದು ಸರಿಯಾದ ಕ್ರಮ ಮತ್ತು ನ್ಯಾಯವಾದ ಕ್ರಮ. ಅವರು ಶ್ರೀಮಾನ್ ಕಿತ್ತೂರ್ ಅವರ ರಾಜೀನಾಮೆಯನ್ನು ಒಪ್ಪಿಕೊಂಡಿದ್ದ ಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಶ್ರೀಮಾನ್ ಆರ್ಮುಗಂ ಅವರು ಹೇಳಿದ ಹಾಗೆ ರಾಜಕಾರಿಣಿಗಳ ಮೇಲೆ ಕೆಲವು ಅಪಾದನೆಗಳು ಡೆಕ್ಕನ್‌ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಮುಂತಾದ ಡೈಲಿ ಪೇಪರಿನಲ್ಲಿಯೂ ಬರುತ್ತವೆ. ಮತ್ತು ವೀಕ್ಲಿ ಪೇಪರ್‌ಗಳಲ್ಲಿಯೂ ಬರುತ್ತವೆ. ಆದರೆ ಅವುಗಳನ್ನು ನಂಬಬೇಕೇ ಬೇಡವೇ ಎನ್ನುವ ಪ್ರಶ್ನೆ ಬರುತ್ತದೆ. ಅವು ಸಣ್ಣ ಪತ್ರಿಕೆಯಲ್ಲೇ ಬರಲಿ ಅಥವಾ ದೊಡ್ಡ ಪತ್ರಿಕೆಯಲ್ಲೇ ಬರಲಿ, ಅವುಗಳನ್ನು ನಾವು ಅಲ್ಲಗಳೆಯು ವಂತಿಲ್ಲ. ಜೊತೆಗೆ ಅವು ನಿಜವಾಗಿರಬಹುದು, ಅಥವಾ ಸುಳ್ಳಾಗಿರಬಹುದು. ಅದನ್ನು ಸ್ಪಷ್ಟವಾಗಿ ಇಷ್ಟೇ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಅದರ ಆಧಾರದ ಮೇಲೆ ನಾನು ಒಂದೆರಡು ವಿಷಯವನ್ನು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಾನು ಬೆಲ್ ಮಾಡಿದ ಮೇಲೆ ತಮ್ಮ ಭಾಷಣವನ್ನು ನಿಲ್ಲಿಸಬೇಕು ಎಂದು ಅರ್ಥಮಾಡಿಕೊಳ್ಳಬೇಕು. ದಯವಿಟ್ಟು ಕುಳಿತುಕೊಳ್ಳಬೇಕು. ಇದುವರೆಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳಬೇಕೋ ಅದನ್ನೆಲ್ಲಾ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಜುಡಿಷಿಯಲ್ ಪ್ರೋಬ್ ಮಾಡಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಆದರೆ ಆ ರೀತಿ ಮಾಡಬೇಕು ಎಂದರೆ ಅದರಲ್ಲಿ ಒಂದು ಪ್ರೈಮಾಫೇಸಿ ಕೇಸು ಇರಬೇಕು.

ಅಧ್ಯಕ್ಷರು.—ಈಗ ಅದನ್ನು ಹೇಳುವುದಕ್ಕಾಗುವುದಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆ ಪ್ರಕಾರ ನಮಗೆ ಸ್ವಲ್ಪ ಅನುಮಾನ ಬರುತ್ತದೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕಿತ್ತೂರ್ ಅವರು ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಅವರಿಗೆ ಫೋನು ಮಾಡಿ ಅವರ ನೆರವು ಕೋರಿದರು. ಸಚಿವರ ಕೋರಿಕೆಯಂತೆ ಡೆಪ್ಯುಟಿ ಕಮಿಷನರ್ ಅವರು ಸಚಿವರ ಮನೆಗೆ ಒಂದು ಟ್ಯಾಕ್ಸಿ ಕಳುಹಿಸುವಂತೆ

ಮುನಿರೆಡ್ಡಿಪಾಳ್ಯದ ಪೋಲೀಸ್ ಸ್ಟೇಷನ್ನಿನ ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್ ಅವರನ್ನು ಕೋರಿದರು, ಆಮೇಲೆ ಪೋಲೀಸ್ ಕಾನ್‌ಸ್ಟೇಬಲ್ ಟ್ಯಾಕ್ಸಿಯನ್ನು ತೆಗೆದುಕೊಂಡು ಬಂದರೆಂದು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ಹೇಳಿದರು. ಆದರೆ ನಮಗೆ ಬಂದಿರುವ ವರ್ತಮಾನದ ಪ್ರಕಾರ ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಅವರಿಗೆ ಮಂತ್ರಿಗಳು ಫೋನ್ ಮಾಡಿದಾಗ ಅವರು ಅದಕ್ಕೆ ಗಮನ ಕೊಡುವುದಿಕ್ಕಾಗುವುದಿಲ್ಲ, ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದರು ಎಂದು ಕಂಪ್ಲೈಂಟ್ ಇದೆ. ಇದು ಹೆಣ್ಣುಮಗಳಿಗೆ ಸಂಬಂಧಪಟ್ಟ ವಿಷಯ. ಇದರಲ್ಲಿ ಪೋಲೀಸಿನವರು ಏತಕ್ಕೆ ಇಂಟರ್‌ಫಿಯರ್ ಆದರು ? ಪೋಲೀಸ್ ಕಾನ್‌ಸ್ಟೇಬಲ್ ಟ್ಯಾಕ್ಸಿ ತೆಗೆದುಕೊಂಡು ಬಂದು ಆಕೆಯನ್ನು ಕರೆದುಕೊಂಡು ಹೋಗಿ ಆಶಾನಿಕೇತನಕ್ಕೆ ಕಳುಹಿಸಿ ಬಂದಿದ್ದಾರೆ. ಆದ್ದರಿಂದ ಇದು ಅನುಮಾನಕ್ಕೆ ಆಸ್ಪದವಾಗುತ್ತದೆ. ಇಂಥ ಒಂದು ಘಟನೆ ಯಾರೋ ಸಾಧಾರಣ ಮನುಷ್ಯರ ಮನೆಯಲ್ಲಿ ನಡೆದಿಲ್ಲ. ಇದು ಮಂತ್ರಿಗಳ ಮನೆಯಲ್ಲಿ ನಡೆದಿದೆ. ಮಂತ್ರಿಗಳು ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಅವರಿಗೆ ಫೋನು ಮಾಡಿದ್ದು, ಮಂತ್ರಿಗಳ ಪಿ. ಎ. ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿದ್ದು, ಕಾನ್‌ಸ್ಟೇಬಲ್ ಆಕೆಯನ್ನು ಟ್ಯಾಕ್ಸಿಯಲ್ಲಿ ಆಶಾನಿಕೇತನಕ್ಕೆ ಕರೆದುಕೊಂಡು ಹೋದದ್ದು ಇವೆಲ್ಲಾ ಅನುಮಾನಗಳಿಗೆ ಅವಕಾಶವನ್ನು ಕೊಡುತ್ತವೆ.

ಶ್ರೀ ಡಿ. ದೇವರಾಜ್ ಅರಸ್ :—ಆ ಬಗ್ಗೆ ಅನುಮಾನಗಳು ಏನಾದರೂ ಇದ್ದರೆ ಅವುಗಳನ್ನು ನನಗೆ ಕಳುಹಿಸಿ ಕೊಡಿ.

SRI M. S. KRISHNAN.—The Hon'ble Chief Minister said one thing, *i. e.*, the Ministers and public people must be above suspicion. But there are many more things.

SRI D. DEVARAJ URS.—If the hon. member has many more things, we will meet and let him kindly let me know, and I will take cognisance of it.

SRI M. S. KRISHNAN.—Sir, it is necessary to have a judicial probe.

SRI D. DEVARAJ URS :—I request the hon. member to leave it at that. ಪತ್ರಿಕೆಯಲ್ಲಿ ಒಂದು ಬಂದಿದೆ ನೀವು ಒಂದು ಹೇಳಿದ್ದೀರಿ ಎಂದರೆ ನಾನು ಏನು ಹೇಳುವುದಕ್ಕಾಗುತ್ತದೆ. I presume I am supposed to make the statement and I also presume the

(Sri D. Devaraj Urs)

House accepts it. Beyond that I do not want to say anything. If the members say something else, I cannot help it.

With the permission of the Chair, I am going to the other House.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಮೇಲ್ಮನೆಯಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿದೆ ಅದಕ್ಕೋಸ್ಕರ ಅವರು ಅಲ್ಲಿಗೆ ಹೋಗುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಮನೆಯಲ್ಲಿ ನಾವು ಒಂದು ಹೇಳಿಕೆಯನ್ನು ಕೊಡಬೇಕು ಎಂದು ಹಠ ಹಿಡಿದಂತೆ ಆ ಮನೆಯಲ್ಲಿಯೂ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ಅವರು ಹಠ ಹಿಡಿದಿದ್ದರು. ಅದರಂತೆ 5 ಗಂಟೆಗೆ ಅಲ್ಲಿ ಸ್ಟೇಟ್‌ಮೆಂಟ್ ಕೊಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಹೋಗಿದ್ದಾರೆ ಅದರ ಬಗ್ಗೆ ನಾನು ತಕರಾರು ಎತ್ತುವುದಿಲ್ಲ.

5-00 P. M.

ಇವತ್ತು ಈ ವಿಷಯದ ಬಗ್ಗೆ ಒಂದು ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕೆಂಬ ಒತ್ತಾಯವನ್ನು ಸರ್ಕಾರದ ಮುಂದೆ ತರುವುದಕ್ಕೆ ಹಲವಾರು ಕಾರಣಗಳು ಇವೆ. ಇವೊತ್ತಿನ ದಿವಸ ರಾಜಕೀಯ ಸ್ಥಾನದಲ್ಲಿ ಇರತಕ್ಕಂತಹ ಮಂತ್ರಿಯಾಗಲಿ, ಮುಖ್ಯಮಂತ್ರಿಯಾಗಲಿ ಅಥವಾ ಶಾಸಕನಾಗಲಿ—ಅವರ ವ್ಯಕ್ತಿ ಚಾರಿತ್ರ್ಯದ ಬಗ್ಗೆ ಸಂಶಯ ಬಂದಾಗ, ಅದರಿಂದ ವಿಮುಕ್ತಗೊಳಿಸಬೇಕಾದರೆ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕಾಗಿದೆ. ಮುಖ್ಯಮಂತ್ರಿಯವರು ಒಂದು ಹೆಜ್ಜೆ ಮುಂದೆ ಹೋಗಿ ಇಂಥ ಸತಸಂಪ್ರದಾಯವನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆ ಇದು ವಿಚಾರಣೆಯ ಘಟ್ಟದಲ್ಲಿರುವಾಗಲೇ ಅವರ ರಾಜೀನಾಮೆಯನ್ನು ಸ್ವೀಕಾರ ಮಾಡಿದ್ದೇನೆ ಎಂದು ಹೇಳಿದ್ದಾರೆ. ಈಗ ನಮ್ಮ ಮುಂದಿರತಕ್ಕಂತಹ ಪ್ರಶ್ನೆ ಏನೆಂದರೆ, ಇವತ್ತು ಉತ್ತಮ ರಾಜಕಾರಣಿಗಳಿಗೆ ರಕ್ಷಣೆ ಇರಬೇಕು. ಏಕೆಂದರೆ ನಾಳೆ ಯಾವಳಾದರೂ ಒಬ್ಬ ಹೆಂಗಸು ಬಂದು ಮಾನ್ಯ ಚನ್ನಬಸಪ್ಪನವರ ತೊಡೆಯ ಮೇಲೆ ಕುಳಿತರೆ ಏನು ಮಾಡುವುದು? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯ ಮಂತ್ರಿಯವರು, ಶ್ರೀಮಾನ್ ಕಿತ್ತೂರ್‌ರವರು ಬಹಳ ಯೋಗ್ಯವಾದ ಯುವಕ ರಾಜಕಾರಣಿ. ಆದರೆ ಸಂಶಯದ ಸುಳಿಯಲ್ಲಿ ಸಿಕ್ಕದೆ ಒಂದು ನಿಷ್ಪಕ್ಷಪಾತವಾದ ವಿಚಾರಣೆ ಮಾಡುವುದಕ್ಕೋಸ್ಕರ ರಾಜೀನಾಮೆ ಅಂಗೀಕಾರ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅವರ ಹೇಳಿಕೆಯಲ್ಲಿ

ಉದ್ಭವಿಸಿರತಕ್ಕಂತಹ ಅನೇಕ ವಿಚಾರಗಳ ಬಗ್ಗೆ ಒಂದು ಇಂಪಾರ್ಷಿಯಾಲ್ ಜುಡಿಷಿಯಾಲ್ ಪ್ರೋಬ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಕೇಳುತ್ತೇನೆ. ಮುಖ್ಯ ಮಂತ್ರಿಯವರು ಒಂದು ಮಾತನ್ನು ಹೇಳಿದರು. 18 ನೇ ತಾರೀಖು 3 ಗಂಟೆಗೆ ಶ್ರೀಮಾನ್ ಕಿತ್ತೂರ್‌ರವರು ಪೋಲೀಸ್ ಡೆಪ್ಯುಟಿ ಕಮೀಶನರಿಗೆ ಫೋನ್ ಮಾಡಿದರು ಎಂದು ಹೇಳಿದರು. ಯಾವ ಒಬ್ಬ ನಾಗರೀಕನ ಮೇಲಾಗಲಿ ಅಥವಾ ಒಬ್ಬ ಯೋಗ್ಯ ಪ್ರಜೆಯ ಮೇಲಾಗಲೀ ಒಬ್ಬ ಹೆಂಗಸು ಬಲಾತ್ಕಾರವಾದ ಪ್ರಯೋಗ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಅಥವಾ ಅಸಭ್ಯ ರೀತಿಯಿಂದ ವರ್ತನೆ ಮಾಡಿದರೆ, ಅಂಥ ಹೆಂಗಸಿನ ಮೇಲೆ ಕಾನೂನು ಪ್ರಕಾರವಾಗಿ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ. ಅಂಥ ವಿಷಯ ಡೆಪ್ಯುಟಿ ಕಮಿಷನರಿಗೆ ಫೋನ್ ಮಾಡಿ ತಿಳಿಸಿದಾಗ, ಡೆಪ್ಯುಟಿ ಕಮಿಷನರ್ ಅವಳ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆಯೇ? ನೀವು ಇವತ್ತಿನ ದಿವಸ ಇದನ್ನು ಅಷ್ಟು ಸುಲಭವಾಗಿ ಮುಚ್ಚುವುದಕ್ಕೆ ಸಾಧ್ಯವಾಗುವುದಿಲ್ಲ. ಅಧಿಕಾರ ಬಲದಿಂದ ಸ್ವಚ್ಛವಾಗಿದ್ದೇವೆ, ಯಾವುದೇ ಸಂಶಯದ ಸುಳಿಯಲ್ಲಿ ಸಿಕ್ಕಿಲ್ಲವೆಂದು ಹೇಳಿದರೆ ದೇಶದ ಜನ ನಂಬುವುದಿಲ್ಲ. ದೇಶದ ಜನ ನಂಬಬೇಕಾದರೆ ಇದರ ಬಗ್ಗೆ ಒಂದು ನಿಷ್ಪಕ್ಷವಾದ ಮತ್ತು ಪ್ರಾಮಾಣಿಕವಾದ ಎನ್‌ಕ್ವಾಯರಿ ಆಗಬೇಕು. ಅಸಭ್ಯ ರೀತಿಯಲ್ಲಿ ಒಬ್ಬ ಹೆಂಗಸು ವರ್ತನೆ ಮಾಡುವುದಕ್ಕೆ ಹೊರಟಾಗ ಅಂಥ ಹೆಂಗಸಿನ ಮೇಲೆ ಪೋಲೀಸರು ಕೇಸ್ ರಿಜಿಸ್ಟರು ಮಾಡಿದ್ದಾರೆಯೇ? ಇವತ್ತು ಮೈಸೂರು ದೇಶದಲ್ಲಿ ಉತ್ತಮವಾದ ಪೋಲೀಸ್ ಅಧಿಕಾರಿಗಳೂ ಇದ್ದಾರೆ. ಆದರೆ ಇವತ್ತು ಪೋಲೀಸ್ ಅಧಿಕಾರಿಯಾದ ಐ. ಜಿ. ಪಿಯವರು ಕೊಟ್ಟಿರತಕ್ಕಂತಹ ವರದಿಯನ್ನು ಮುಚ್ಚಿಡುವುದಕ್ಕೆ ತಾವು ಪ್ರಯತ್ನ ಮಾಡಿದ್ದೀರಿ. ನಾನು ಹೇಳುವುದರಲ್ಲಿ ಏನಾದರೂ ಸುಳ್ಳು ಇದ್ದರೆ, ನಾನು ಅಪಾಲಜಿ ಕೇಳುವುದಕ್ಕೆ ತಯಾರಾಗಿದ್ದೇನೆ. ಪೋಲೀಸ್ ಅಧಿಕಾರಿ ಕಿತ್ತೂರ್‌ರವರ ಮೇಲೆ ಕೇಸ್ ರಿಜಿಸ್ಟರ್ ಮಾಡಬೇಕೆಂಬ ಪ್ರಶ್ನೆ ಬಂದಾಗ ಇದನ್ನು ಆ ರೀತಿ ಮಾಡಿದ್ದಾರೆಂದು ಕಾಣುತ್ತದೆ. ಒಬ್ಬ ಉತ್ತಮವಾದ ರಾಜಕಾರಣಿಯ ಮುಖಕ್ಕೆ ಯಾರಾದರೂ ಮಸಿಬಳೆಯುವುದಕ್ಕೆ ಪ್ರಯತ್ನ ಮಾಡಿದಾಗ ತಮ್ಮ ಸರ್ಕಾರದ ಪೋಲೀಸ್ ಅಧಿಕಾರಿಗಳು ಏಕೆ ಕೇಸ್ ರಿಜಿಸ್ಟರ್ ಮಾಡಿಲ್ಲ? ದೇಶದಲ್ಲಿ ಯೋಗ್ಯ ರಾಜಕಾರಣಿಗಳಿಗೆ ಕೆಟ್ಟ ಹೆಸರು ಬರುವುದಕ್ಕೆ ಅವಕಾಶ ಕೊಡಬಾರದು. ಅವರಿಗೆ ತಾವು ರಕ್ಷಣೆ ಕೊಡಬೇಕು. ತಾವು ಕೊಟ್ಟಿರತಕ್ಕಂತಹ ವರದಿಯ ಮೇಲೆ ಆಶ್ರಮಕ್ಕೆ ಸೇರಿಸಿದಾಗ ಮಂತ್ರಿಯವರ ಪಿ. ಎ. ಅಲ್ಲಿಗೆ ಹೋಗಿದ್ದಾರೆ. ಆ ಹೆಂಗಸಿನ ಜೊತೆ ಪೋಲೀಸ್ ಅಧಿಕಾರಿ ಹೋಗಿರುವಾಗ ಮಂತ್ರಿಯವರ ಪಿ. ಎ. ಅಲ್ಲಿಯವರೆಗೆ ಏಕೆ ಹೋಗಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ :—ನಾಳೆ ವಿಚಾರಣೆಯಾದಾಗ ಅವೆಲ್ಲವೂ ಬರುತ್ತವೆ.

ಶ್ರೀ ಹೆಚ್. ಡಿ. ದೇವೇಗೌಡ — ತಾವು ಇವರ ಬಗ್ಗೆ ಸುಲಭವಾದ ಹೇಳಿಕೆ ಕೊಟ್ಟು ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಬಾರದು ಇವೊತ್ತಿನ ದಿವಸ ರಾಜ್ಯಕ್ಕೆ ಉತ್ತಮವಾದ ಆಡಳಿತವನ್ನು ದೊರಕಿಸಿಕೊಡುವುದಕ್ಕೆ ವಿರೋಧ ಪಕ್ಷದ ವರು ಸಹ ಅಷ್ಟೇ ಆಸಕ್ತರಾಗಿದ್ದಾರೆ. ಉತ್ತಮವಾದ ರಾಜಕೀಯ ವ್ಯಕ್ತಿಗಳ ಉತ್ತಮವಾದ ಜೀವನಕ್ಕೆ ಮಸಿ ಬಳಿಯುವುದಕ್ಕೆ ಯಾರಾದರೂ ಪ್ರಯತ್ನ ಮಾಡಿ ದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಬ್ಬ ನಾಗರೀಕ ಒಬ್ಬ ಮಹಿಳೆಯ ಮೇಲೆ ಅಥವಾ ಒಬ್ಬ ಮಹಿಳೆ ಒಬ್ಬ ನಾಗರೀಕನ ಮೇಲೆ ಅತ್ಯಾಚಾರ ಮಾಡಿದರೆ ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ವಿ. ಎನ್ ಪಾಟೀಲ್.—ಅತ್ಯಾಚಾರ ಮಿನಿಸ್ಟರ್ ಮೇಲೆ ಮಾಡಿದ್ದಾ ರೆಂದು ಕಂಪ್ಲೈಂಟ್ ಕೊಟ್ಟರೋ ?

ಶ್ರೀ ಎಚ್. ಡಿ. ದೇವೇಗೌಡ: ಆಶ್ರಮಕ್ಕೆ ಬುದ್ಧಿಭ್ರಮಣೆ ಇರುವುದರಿಂದ ಸೇರಿಸಿದ್ದು ಎಂದು ಹೇಳುತ್ತಿದ್ದಾರೆ. ಅವಳಿಗೆ ಬುದ್ಧಿ ಭ್ರಮಣೆ ಇಲ್ಲವೆಂದು ಅವರು ಟ್ಯಾಕ್ಸಿಯಲ್ಲಿ ಹೋಗುತ್ತಿದ್ದಾಗ ನಡೆಯುತ್ತಿದ್ದ ಮಾತುಕತೆಗಳಲ್ಲಿ ಗೊತ್ತಾಗುತ್ತಿತ್ತು. ಇದರ ಹಿನ್ನಲೆಯಾದರೂ ಏನು ? ಅಲ್ಲದೆ ಆಶ್ರಮದ ಮಿ. ಜಾನ್ ಮತ್ತು ಕುಮಾರಿ ಡಿಕಾಸ್ಟಾ ಬುದ್ಧಿಭ್ರಮಣೆ ಅವಳಿಗೆ ಇಲ್ಲ, ಒತ್ತಡ ಹಾಕಿ ತರಿಸಿಕೊಂಡಿದ್ದಾರೆಂದು ಹೇಳಿದ್ದಾರೆ.

SRI H. M. CHANNABASAPPA.—The Hon. Chief Minister has made a statement of facts as promised by him yesterday. Now, I would like to know if this statement is a subject matter for discussion and that has been allowed by the Hon. Speaker; and if so, under what Rules of procedure it has been allowed?

ಶ್ರೀ ಎಚ್. ಡಿ. ದೇವೇಗೌಡ :.... ಈ ದೇಶದಲ್ಲಿ ಮಂತ್ರಿಗಳ ಮನೆಗೆ ಹೆಂಗಸರು ಹೋಗಿ ಇಂತಹ ವ್ಯವಹಾರ ಮಾಡುವುದು ಯಾವ ಕಾನೂನಿನಲ್ಲಿ ಬರೆದಿದೆ ? ಹೆಂಗಸರು ಮಂತ್ರಿಗಳ ನಾಜೋಕು ನೋಡಿ ಅವರ ಮೇಲೆ ಬಿದ್ದು ಈ ತರಹ ವ್ಯವಹಾರ ನಡೆಸಬಹುದೆಂದು ಈ ದೇಶದ ಕಾನೂನಿನಲ್ಲಿ ಯಾರು ಬರೆದಿದ್ದಾರೆ ? ನಿಮಗೆ ಅಧಿಕಾರವಿದೆಯೆಂದು ಈ ರೀತಿ ಮಾಡಬಾರದು. ಮಾನ್ಯ ಶ್ರೀ ಚನ್ನಬಸಪ್ಪನವರೇ, ನೀವು ಇಂತಹ ವಿಷಯಗಳ ಬಗ್ಗೆ ರಾಜ ಕಾರಣಗಳಾಗಿ ಸದಾ ಕಾಲದಲ್ಲಿಯೂ ಇದ್ದುಕೊಂಡು ಯಾರೋ ಒಬ್ಬರಿಗಾಗಿ ಇಷ್ಟ ಬಂದಹಾಗೆ ನಡೆಸಿಕೊಂಡು ಇರಲಾರಿರಿ. ಈ ದೇಶದಲ್ಲಿ ಒಳ್ಳೆಯ ಸಂಪ್ರ ದಾಯ ಬಿಟ್ಟು ಕೆಟ್ಟ ಸಂಪ್ರದಾಯವನ್ನು ಹಾಕುವುದಕ್ಕೆ ಅವಕಾಶಕೊಡಬೇಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ :— ನಾನು ಹೋಗುತ್ತೇನೆಂದು ಯಾರು ಹೇಳಿದರು ?

ಶ್ರೀ ಎಚ್. ಡಿ. ದೇವೇಗೌಡ :— ಆ ವಿಷಯವನ್ನು ಇಲ್ಲಿಗೇ ಬಿಡಲಿಕ್ಕೆ ನಾನು ತಯಾರು ಆಗಿಲ್ಲ. ನನ್ನ ಮೇಲೆ ವಿರೋಧ ಪಕ್ಷದ ನಾಯಕರು ಅಸಭ್ಯ ರೀತಿಯಲ್ಲಿ ಈ ಸಭೆಯಲ್ಲಿ ಮಾತನಾಡುತ್ತಿದ್ದಾರೆಂದು ಅಪಾದನೆ ಬಂದರೂ ಚಿಂತಿಲ್ಲ ಆದ್ದರಿಂದ ಈ ವಿಷಯವನ್ನು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಬೇಕು. ನಿಮ್ಮನ್ನು ಯಾವರೀತಿ ಶಿಕ್ಷೆ ಮಾಡಿದರೂ ತಪ್ಪು ಇಲ್ಲ, ಈ ವಿಚಾರವನ್ನು ತೀರ್ಮಾನ ಮಾಡದೆ ಮತ್ತೆ ಬೇರೆ ವ್ಯವಹಾರ ಮಾಡಲಿಕ್ಕೆ ಬಿಡುವುದಿಲ್ಲ. ನೀವು ಏನು ಬೇಕಾದರೂ ಮಾಡಿ. ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗುತ್ತೇನೆ. ಮಾರನೆಯ ದಿವಸ ಆ ಹೆಂಗಸು ಎಲ್ಲಿ ಹೋದಳು ಎಂಬುದು ಪತ್ತೆಯೇ ಇಲ್ಲವೆಂದು ಹೇಳಿದರೆ ಹೇಗೆ? ಈ ದೇಶದಲ್ಲಿ ಯಾರಿಗೆ ರಕ್ಷಣೆ ಇದೆ? ಇವತ್ತು ಒಬ್ಬ ಹೆಂಗಸಿನಿಂದ ಏನು ಆಗುತ್ತಿದೆಯೆಂದು ಹೇಳುವುದಕ್ಕೆ ಬದಲಾಗಿ ಕಾನೂನು ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಒಬ್ಬ ರಾಜ್ಯ ಸಚಿವರ ಮಾನ, ಮರ್ಯಾದೆ ಕಾಪಾಡತಕ್ಕ ಸನ್ನಿವೇಶದಲ್ಲಿ ಅವರ ಪ್ರಾಣ, ಮಾನ ಇವೆರಡಕ್ಕೂ ಧಕ್ಕೆ ಬಂದಿದೆ. ಈ ದೇಶದ ಯಾವ ಹೆಂಗಸೇ ಆಗಿರಲಿ, ಅವರು ಯಾವ ಜನಾಂಗಕ್ಕೆ ಸೇರಿದವರೇ ಆಗಿರಲಿ, ಅವರು ಯಾವ ಪ್ರಾಂತಕ್ಕೇ ಸೇರಿರಲಿ, ಅವಳು ಹೆಂಗಸೇ ಆಗಿರಲಿ, ಆ ಒಂದು ವ್ಯಕ್ತಿಯ ಮಾನ ಸಂರಕ್ಷಣೆ, ಪ್ರಾಣ ಸಂರಕ್ಷಣೆ ಮಾಡುವುದಕ್ಕೆ ಇಂತಹ ಪೋಲೀಸ್ ಅಧಿಕಾರಿಗಳ ತಂಡವನ್ನು ಇಟ್ಟು ಕೊಂಡರೆ ಅದೇನೂ ಸಾಧ್ಯವಿಲ್ಲ. ಅಂತಹವರಿಂದ ಪೋಲೀಸ್ ಇಲಾಖೆಗೆ ಅಗೌರವವಾಗುತ್ತದೆ. ಪೋಲೀಸ್ ಇಲಾಖೆ ಯವರ ಒಂದು ಅಸಮರ್ಥತೆ ಪೋಲೀಸ್ ಇಲಾಖೆಗೆ ಕೊಟ್ಟಿರತಕ್ಕ ವರದಿಯನ್ನು ಮುಚ್ಚಿಡುವುದಕ್ಕೆ ಇದು ಸೃಷ್ಟೀಕರಣವಾಗುತ್ತದೆ, ಐ. ಜಿ. ಪಿ. ಯವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟನ್ನು ಈ ಸಭೆಯ ಮುಂದೆ ಇಟ್ಟರೆ ಮಾತ್ರ ಆಗ ಪೋಲೀಸ್ ಅಧಿಕಾರಿಗಳು ಯಾವರೀತಿ ಪ್ರಾಮಾಣಿಕತೆಯಿಂದ ಕ್ರಮವನ್ನು ತಗೆದುಕೊಂಡಿದ್ದಾರೆಂಬುದನ್ನು ತಿಳಿದುಕೊಳ್ಳಬಹುದು. ಇದರಲ್ಲಿ ಅವರ ಮಾನ, ಮರ್ಯಾದೆ, ಘನತೆಯ ಪ್ರಶ್ನೆಯ ಬಗ್ಗೆ ಶಿಫಾರಸು ಮಾಡುವುದರಿಂದ ನಿಮ್ಮ ಘನತೆಯೇನೂ ಹೆಚ್ಚಾಗುವುದಿಲ್ಲ, ಈ ದೇಶದ ಜನತೆಗೆ ಯಾವುದೇ ಕಾರಣದಿಂದ ಯಾರೇ ತಪ್ಪಿತಸ್ಥರೇ ಆಗಿರಲಿ, ಅದನ್ನು ವ್ಯಕ್ತಪಡಿಸಬೇಕಾದರೆ ಇದರ ಬಗ್ಗೆ ಜುಡಿಷಿಯಲ್ ಪ್ರೋಬ್ ಆಗಬೇಕು. ಇವತ್ತು ಮಾನ್ಯ ಶ್ರೀ ಕಿತ್ತೂರು ಅವರು ಒಬ್ಬ ವ್ಯಕ್ತಿ ಮಾತ್ರ ರಾಜೀನಾಮೆ ಕೊಟ್ಟಿದ್ದಾರೆಂದು ಕೇಳಿದ್ದೇನೆ ಇದರಲ್ಲಿ ಹಲವಾರು ರಾಜಕಾರಣಿಗಳು ಸೇರಿದ್ದಾರೆಂಬ ಆರೋಪಣೆಯನ್ನು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಈ ವಿಚಾರವಾಗಿ ಮಾತನಾಡಿದ ಮೇಲೆ ನಾನು ಮಾತನಾಡಭಾರದೆಂದು ಇದ್ದೆ. ಆದರೆ ಸುಮಾರು ಮೂರು ಜನರು ಈ ಒಂದು

(ಶ್ರೀ ಎಚ್. ಡಿ. ದೇವೇಗೌಡ)

ಪ್ರಕರಣದಲ್ಲಿ ಅದರಲ್ಲಿಯೂ ಕ್ಯಾಬಿನೆಟ್‌ನಲ್ಲಿರುವವರೇ ಸೇರಿದ್ದಾರೆ. ಮಾನ್ಯ ಶ್ರೀ ಕಿತ್ತೂರ್ ಅವರು ಇವತ್ತಿನ ಈ ಸಂದರ್ಭದ ಒಂದು ಯಜ್ಞಪಶುವಾಗಿದ್ದರೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ವಿಚಾರವನ್ನು ಮಾನ್ಯ ಶ್ರೀ ಹೆಗ್ಗಡೆಯವರು ಬೇರೆ ಹೇಳುತ್ತಾರೆ. ಇದರ ಬಗ್ಗೆ ಯಾವುದೇ ಮಾಹಿತಿಯನ್ನು ಮತ್ತು ಯಾವುದೇ ಸಾಕ್ಷಿ ಸಾಹಿತ್ಯವನ್ನು ಸಂಗ್ರಹಣೆ ಮಾಡಬೇಕಾದರೆ ಪೋಲೀಸ್ ಅಧಿಕಾರಿಗಳು ನಿಷ್ಪಕ್ಷಪಾತವಾದ ವಿಚಾರವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಒಂದು ಆರೋಪಣೆಯಿಂದ ವಿಮುಕ್ತರಾಗಬೇಕಾದರೆ, there must be an impartial enquiry...... ....

SRI B. BASAVALINGAPPA.— What is this simply going on discussing this subject violating the rules and regulations ?

ಶ್ರೀ ವಾಟಾಳ್ ನಾಗರಾಜ್ : ಜುಡಿಷಿಯಲ್ ವಿಚಾರಣೆ ಮಾಡಿದರೆ ಹಲವರು ಖಂಡಿತವಾಗಿ ಈಚೆಗೆ ಬರುತ್ತಾರೆ.

SRI B. BASAVALINGAPPA : I am worried about the procedure.

SRI H. D. DEVEGOWDA : Where is the procedure in this State? ಇವತ್ತು ನಮ್ಮಲ್ಲಿ ಗೌರವ, ಪ್ರತಿಷ್ಠೆ ಬರಬೇಕಾದರೆ ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಿ, ಇಲ್ಲದಿದ್ದರೆ ಆ ಹೆಂಗಸನ್ನು ಈ ಸಭೆಗೆ ಕರೆಸಿ ಈ ಸಭೆಯ ಮುಂದೆ ಹೇಳಿಕೆ ಮಾಡಿಸಿ. ನಮಗೆ ಮಾನ್ಯ ಶ್ರೀ ಬಸವಲಿಂಗಪ್ಪನವರ ಆಕ್ರೋಶ ಬೇಕಾಗಿಲ್ಲ. ಇದೇನು ಪ್ರೊಸೀಜರ್ ?

SRI B. BASAVALINGAPPA : That is a different issue. If you want to take action against the officer for dereliction of duty, that is a different matter. Please have some patience.

SRI H. D. DEVEGOWDA : There should be a judicial enquiry. If the Government say that there will be a judicial enquiry, I will keep quite.

SRI H. SIDDAVEERAPPA : What is meant by judicial enquiry ?

SRI H. D. DEVE GOWDA : There must be an impartial enquiry.

SRI H. SIDDAVEERAPPA : Any enquiry must be judicious.

ಶ್ರೀ ಎಂ. ಎಸ್. ಕೃಷ್ಣನ್.— ನೀವು ಹೇಗೆ ಟ್ವಿಸ್ಟ್ ಮಾಡುತ್ತೀರಿ, ನೋಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಬುದ್ಧಿ ಭ್ರಮಣೆಯಾಗಿರತಕ್ಕ ಹೆಂಗಸನ್ನು ನಿಮ್ಮ ಹತ್ತಿರ ಕಳುಹಿಸಬೇಕು. ಅಂದಮೇಲೆ ಅವಳನ್ನು ಹೇಗೆ ಪೋಲೀಸ್ ಸ್ಟೇಷನ್ನಿಗೆ ಕಳುಹಿಸಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನನ್ನು ಏಕೆ ಮಾನ್ಯ ಶ್ರೀ ಕಿತ್ತೂರ್ ಅವರ ಜೊತೆಗೆ ಸೇರಿಸುತ್ತೀರಿ ?

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಶ್ರೀ ಕಿತ್ತೂರ್ ಅವರ ಜೊತೆಗೆ ಬರುವವರು ಬಹಳ ಜನ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ಆ ಹೆಂಗಸು ಪತ್ತೆಯಾದ ಕೂಡಲೇ ಬಹಳ ಜನ ಮಂತ್ರಿಗಳು ಮಾನ್ಯ ಶ್ರೀ ಕಿತ್ತೂರ್ ಅವರ ಹಾಗೆ ಹೊರಗೆ ಬರಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.— ಮಂತ್ರಿಮಂಡಲಕ್ಕೆ ಕಳಂಕ ತರುವ ಯೋಚನೆಯನ್ನು ಯಾರೂ ಮಾಡುವುದಿಲ್ಲ. ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಇನ್ನು 4 ವರ್ಷಗಳವರೆಗೆ ಮುಖ್ಯ ಮಂತ್ರಿಯಾಗಿ 1977ನೇ ಮಹಾ ಚುನಾವಣೆಯಲ್ಲಿ ನಿಮ್ಮನ್ನು ನೋಡತಕ್ಕವರಿಗೆ ಪುನಃ ಓಟು ಕೊಡುವ ಹಾಗೆ ಒಳ್ಳೆಯ ಕೆಲಸವನ್ನು ಮಾಡಿ ಜನಾದರಣೆಯನ್ನು ಪಡೆಯಬೇಕು. ಆದರೆ ಇಲ್ಲಿಯವರೆಗೂ ನೀವು ನಡೆಸಿರತಕ್ಕ ರಾಜ್ಯಾಡಳಿತ ಕಾಲದಲ್ಲಿ ಉಂಟಾಗಿರುವ ಸಮಸ್ಯೆಗಳು ಬಹಳವಾಗಿವೆ. ನಿಮ್ಮ ರಾಜ್ಯಾಡಳಿತ ಕಾಲದಲ್ಲಿ ಬಹು ಮುಖ್ಯವಾಗಿ ಗೌರವಸ್ಥ ಮಹಿಳೆಯರಿಗೆ ಈ ರಾಜ್ಯದಲ್ಲಿ ರಕ್ಷಣೆ ಬೇಕು. ಹಿಂದೆ ಜಯಲಲಿತ ಪ್ರಕರಣ ಬೇರೆ ಬಂದಿದೆ. ಆ ವಿಷಯವಾಗಿ ನಾನು ಈಗ ಪೂರ್ತಿಯಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆಗಲೂ ಮಾನ್ಯ ಶ್ರೀ ಕಪೂರರಿಂದ ಪೋಲೀಸ್ ವಿಚಾರಣೆ ಆಯಿತು. ಅದು ಪ್ರಪಂಚ ಎನ್ನುವ ಪತ್ರಿಕೆಯಲ್ಲಿಯೂ ಬಂದಿತ್ತು. ಒಟ್ಟಿನಲ್ಲಿ ಇದರ ಬಗ್ಗೆ ಜುಡಿಷಿಯಲ್ ಪ್ರೋಬ್ ಆಗಲೇ ಬೇಕು. ಆದರೆ ಹೊರಗೆ ನಿಮ್ಮ ಯಂತ್ರಗಳನ್ನು ಎಷ್ಟೇ ಪ್ರಯೋಗಮಾಡಿದರೂ ಇದರ ಬಗ್ಗೆ ಮತ್ತೆ ಮಾತ್ರೇ

(ಶ್ರೀ ಎಚ್. ಡಿ. ದೇವೇಗೌಡ)

ಇಲ್ಲ. ಇಂಡಿಪೆಂಡೆಂಟ್ ಆಗಿ ವಿಚಾರಣೆ ಮಾಡುವುದಕ್ಕೆ ಸರ್ಕಾರ ಒಪ್ಪಬೇಕು. ಅಲ್ಲಿಯವರೆಗೂ ಇದಕ್ಕೆ ನಾವು ಮಣಿಯುವುದಕ್ಕೆ ತಯಾರಾಗಿಲ್ಲ. Unless the Government categorically assures for an independent probe I am not prepared to concur with the Government views.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ನಾಯಕರು ಏನು ಹೇಳಿದ್ದಾರೆಂದರೆ ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂಬುದು. ಇದರ ಬಗ್ಗೆ ನಾನು ಎರಡು ವಿಷಯಗಳನ್ನು ಹೇಳಬೇಕಾಗಿದೆ ನ್ಯಾಯಾಂಗ ವಿಚಾರಣೆಯಾಗಬೇಕಾದುದು. ಒಂದು. ಇನ್ನೊಂದು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು.

SRI H. M. CHANNABASAPPA:—I rise on a point of order. The Chief Minister has made a statement of fact and he has also assured that he would not rest till the enquiry is made and truth comes out. According to procedure we have got to function as per agenda. We have got to carry on the business with which we are entrusted to. Is this the subject matter for discussion? If you allow us like this what is the business to be transacted?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪ್ರಪಂಚದಲ್ಲಿ ನಡೆಯದೇ ಇರುವುದು ಈಗ ನಡೆದಿದೆ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ಯಾರಿಗೆ ಬೇಕು?

ಶ್ರೀ ಕೋಣಂದೂರು ಲಿಂಗಪ್ಪ : ಅಧ್ಯಕ್ಷರೇ, ಇದೇ ವಿಚಾರದಲ್ಲಿ ನಾನು ತಮ್ಮ ಗಮನಕ್ಕೆ ಎರಡು ಹೊಸ ವಿಚಾರಗಳನ್ನು ತರಬೇಕಾಗಿದೆ..........

ಅಧ್ಯಕ್ಷರು : ಇದೇನು ಇದರ ಬಗ್ಗೆ ಒಂದು ದೊಡ್ಡ ಚರ್ಚೆ ನಡೆಯಬೇಕೆಂಬುದು ತಮ್ಮ ಉದ್ದೇಶವೇ ?

ಶ್ರೀ ಕೋಣಂದೂರು ಲಿಂಗಪ್ಪ : ಖಂಡಿತ ಅದು ನನ್ನ ಉದ್ದೇಶವಲ್ಲ. ಆದರೆ...........

ಶ್ರೀ ಎಚ್. ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಕ್ಷಮಿಸಬೇಕು. ತಾವು ಈ ವಿಚಾರದಲ್ಲಿ ಒಂದು ರೂಲಿಂಗನ್ನು ಕೊಟ್ಟು ಅದನ್ನು

ವಿರೋಧಪಕ್ಷದವರು ಮಾನ್ಯತೆ ಮಾಡಲಿಲ್ಲ ಎಂಬ ಅಪವಾದಕ್ಕೆ ದಯಮಾಡಿ ನಮ್ಮನ್ನು ಗುರಿಮಾಡಬೇಡಿ. ಆದುದರಿಂದ ತಾವು ಇದರಲ್ಲಿ ಆತುರಾತುರದಿಂದ ರೂಲಿಂಗನ್ನು ಕೊಡಬಾರದೆಂದು ನನ್ನ ನಮ್ರತೆಯ ಪ್ರಾರ್ಥನೆ.

ರಾಜ್ಯದಲ್ಲಿ ಇಂಥ ಒಂದು ಏನು ಘಟನೆ ನಡೆದಿದೆ ಈ ದಿವಸ ಇದಕ್ಕಿಂತಲೂ ಒಂದು ಪ್ರಾಮುಖ್ಯವಾದ ಘಟನೆಯುಂಟೇ ? ಅಧ್ಯಕ್ಷರೇ ತಾವೇ ಹೇಳಿ ? ಪೋಲೀಸ್ ಅಧಿಕಾರಿಗಳು ಬರೆದಿದ್ದ ಡೈರಿಯನ್ನೆಲ್ಲಾ ತೆಗೆಸಿ ಅಲ್ಲಿ ಫ್ಯಾಬ್ರಿಕೇಟ್ ಮಾಡಿದ್ದಾರೆ. ಈ ವಿಚಾರದಲ್ಲಿ ಐ. ಜಿ. ಪಿ. ವಿಚಾರಣೆಯ ವರದಿಯನ್ನು ಸಭೆಯ ಮುಂದೆ ಇಡಿ ಆದರೆ ನಾವಂತೂ ಸಾರಿ ಸಾರಿ ಹೇಳುತ್ತೇವೆ. ಪೋಲೀಸ್ ಎನ್‌ಕ್ವೈರಿಗೆ ನಾವು ಒಪ್ಪತಕ್ಕವರಲ್ಲ. ಈ ವಿಚಾರದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಾದರೆ ಮಾತ್ರ ನಾವು ಒಪ್ಪುತ್ತೇವೆ. ಆ ಹೆಣ್ಣುಮಗಳು ಈ ದಿವಸ ಎಲ್ಲಿ ಇದ್ದಾಳೆಂಬುದೇ ಗೊತ್ತಿಲ್ಲ ಎಂದು ಹೇಳುತ್ತಿರುವಾಗ ಈ ರಾಜ್ಯ ದಲ್ಲಿ ಯಾರಿಗೆ ರಕ್ಷಣೆ ಇದೆ ?

SRI H. SIDDAVEERAPPA : If you also come to power, the first information must always come to the Government from the Police. Subsequently, if it calls for any further enquiry by any authority, that can be looked into. We cannot rule this country, without the Police. Even when you come to power tomorrow, you must have the same Police.

ಶ್ರೀ ಎಚ್. ಡಿ. ದೇವೇಗೌಡ : ಇದೇ ಮಾನ್ಯ ಸಿದ್ದವೀರಪ್ಪನವರು ಹಿಂದೆಲ್ಲಾ ಅನೇಕ ಸಂದರ್ಭಗಳಲ್ಲಿ ನೀವು ಯಾವ ವಿಷಯದಲ್ಲಿ ಬೇಕಾದರೂ ಎಂಥಾ ಎನ್‌ಕ್ವೈರಿಯನ್ನಾದರೂ ಮಾಡಿ ಅದಕ್ಕೆ ನಾವು ಜಗ್ಗುವುದಿಲ್ಲ. ಎಂದು ಹೇಳಿದ್ದನ್ನು ಇಂದು ಮಾನ್ಯ ಸದಸ್ಯರು ಜ್ಞಾಪಕ ಮಾಡಿಕೊಂಡರೆ ಒಳ್ಳೆಯದೆಂದು ನಾನು ಅವರಿಗೆ ತಿಳಿಸಬಯಸುತ್ತೇನೆ. ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಇದಕ್ಕಿಂತ ಗಹನವಾದ ವಿಷಯಬೇಕೇ ? ಮಾನ್ಯ ಮಂತ್ರಿಗಳೆನಿಸಿಕೊಳ್ಳ ತಕ್ಕವರು ಇನ್ನೂ ತಲೆ ಎತ್ತಿಕೊಂಡು ರಾಜ್ಯದಲ್ಲಿ ತಿರುಗಾಡಬಹುದೇ ? ಈಗ ನಡೆದಿರುವುದು ನಾಚಿಗೇಡಿನ ವಿಚಾರವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ :—ವಿಚಾರಣೆ ಮಾಡುವುದಕ್ಕೆ ದೂರಿನ ಅರ್ಜಿ ಎಲ್ಲಿದೆ. ಯಾರು ಕೊಟ್ಟಿದ್ದಾರೆ ? Where is the complaint ?

SRI B. BASAVALINGAPPA :—Let us take the sense of the House.

ಶ್ರೀ ವಾಟಾಳ್‌ನಾಗರಾಜ :—ಆಡಳಿತ ಪಕ್ಷದಲ್ಲೂ ಇದಕ್ಕೆ ಕೈ ಎತ್ತುವ ಸದಸ್ಯರಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :—ನಾನು ಹೇಳುತ್ತೇನೆ........

ಶ್ರೀ ಬಿ. ಪುಟ್ಟಸ್ವಾಮಯ್ಯ :—ಈ ದುರಂತ ನಡೆಸಿರುವುದರಲ್ಲಿ ಒಂದು ಕಂಪೆನಿ ಒಂದು ಗ್ಯಾಂಗೇ ಇದೆ.....

ಶ್ರೀ ಎಚ್. ಡಿ. ದೇವೇಗೌಡ :—ಇದರಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು

ಅಧ್ಯಕ್ಷರು :—ಆ ವಿಚಾರಣೆ ಆಗದೇನೇ ಇರುವಾಗ ಅದನ್ನು ಹೇಗೆ ನಿಷ್ಪಕ್ಷಪಾತವಾಗಿಲ್ಲ ಎಂದು ಹೇಳುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ :—ಪೋಲೀಸರಿಂದ ನಿಷ್ಪಕ್ಷಪಾತವಾದ ವಿಚಾರಣೆ ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು :—ಅವರಿಂದ ವರದಿ ಬರದೇನೇ ಹೇಗೆ ವಿಚಾರಣೆಯನ್ನು ಪ್ರಾರಂಭ ಮಾಡುವುದು?

ಶ್ರೀ. ಎಚ್. ಡಿ. ದೇವೇಗೌಡ.—ಆ ಹೆಣ್ಣು ಮಗಳನ್ನು ಆ ಪೋಲೀಸ್ ಡೆಪ್ಯುಟಿ ಕಮಿಷನರು, ಅಸಿಸ್ಟೆಂಟ್ ಕಮಿಷನರೂ ಮತ್ತು ಹೆಡ್ ಕಾನ್‌ಸ್ಟೇಬಲ್ ಬಲತ್ಕಾರದಿಂದ ಹೇಗೆ ಅಲ್ಲಿಗೆ ಕರೆದು ಕೊಂಡು ಹೋದರು? ಅವರನ್ನು ಇನ್ನೂ ಏಕೆ ಸಸ್‌ಪೆಂಡ್ ಮಾಡಲಿಲ್ಲ? ಪೋಲೀಸ್ ಎನ್‌ಕ್ವೈರಿಯಲ್ಲಿ ನಮಗೆ ಖಂಡಿತಾ ನಂಬಿಕೆಯಿಲ್ಲ. ಆ ಹೆಣ್ಣು ಮಗಳಿಗೆ ಬುದ್ಧಿ ಭ್ರಮಣೆ ಇರಲಿಲ್ಲ ಎಂದು ಆ ಆಶ್ರಮದ ಅಧಿಕಾರಿ ಮತ್ತು ಆ ಠಿಕಾಸ್ವಾ ಹೇಳಿದ್ದಾರೆ. ಅಕೆ ಅಲ್ಲಿಂದ ಬೆಳಗ್ಗೆ ಎದ್ದು ಹೋದಳು ಎಂದರೆ—ಎಲ್ಲಿಗೆ ಹೋದಳು? ಏನಾದಳು? ಶ್ರೀಮಾನ್ ಸಿದ್ದಪ್ಪನವರು ಹೇಳುತ್ತಾರೆ. ಇಲ್ಲಿಗೆ ನಾಲ್ಕು ದಿನಗಳ ಕೆಳಗೆ ಆಕೆಯನ್ನು ಸಾಯಿಸಿ—ಸುಟ್ಟು ಹಾಕಿದ್ದಾರೆ—ಎಂದು. ಹೀಗೆ ಒಂದೊಂದಕ್ಕೂ ಒಂದೊಂದನ್ನು ಹೆಣದುಕೊಂಡು ಹೋಗುವುದಾದರೆ ಇದಕ್ಕೆ ಕೊನೆ ಮಾಡಲಿಲ್ಲ. ಇಂಥ ಕಥೆಗಳನ್ನು ನಾವು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ :—ಅಧ್ಯಕ್ಷರೇ ನಮಗೆಲ್ಲಾ ಇದರಲ್ಲಿರತಕ್ಕ ಒಂದೇ ಒಂದು ಭಯ ಏನೆಂದರೆ ಕ್ಯಾಬಿನೆಟ್ಟಿನಲ್ಲಿರತಕ್ಕ ಶ್ರೀ ಸಿದ್ದವೀರಪ್ಪ ಮತ್ತು

ಚನ್ನಬಸಪ್ಪನವರ ರಾಜಕೀಯ ವೈರಿಗಳು ನಾಳೆ ಇದೇ ರೀತಿ ಒಬ್ಬ ಹೆಣ್ಣು ಮಗಳನ್ನು ಇವರಿಬ್ಬರ ಮನೆಗೆ ಕಳುಹಿಸಿ ಅವರಿಗೆ ಮುತ್ತು ಕೊಡಿಸಿ ನಾಳೆ ಇವರನ್ನು ಮನೆಗೆ ಕಳುಹಿಸುವುದಕ್ಕೆ ಇಂಥಾದ್ದು ದಾರಿಯಾದೀತು. ಅದಕ್ಕೆ ಅವಕಾಶವಿಲ್ಲದಿರುವಂತೆ ಇದರ ಬಗ್ಗೆ ಒಂದು ಜ್ಯುಡಿಷಿಯಲ್ ಪ್ರೋಬ್ ನಡೆಸಿ ಎಂದು ಒತ್ತಾಯ ಮಾಡುತ್ತಿರುವುದು.

ಶ್ರೀ ಹೆಚ್. ಡಿ. ದೇವೇಗೌಡ :—ನಾನು ಹೇಳುತ್ತಿರುವುದು ಈ ಒಬ್ಬ ಕಿತ್ತೂರರ ವಿಚಾರವಲ್ಲ. ಈ ಪ್ರಸಂಗದಲ್ಲಿ ಇನ್ನೂ ಅನೇಕ ಜನ ಕಿತ್ತೂರುಗಳಿದ್ದಾರೆ. ಮಂತ್ರಿ ಮಂಡಲದಲ್ಲಿರತಕ್ಕವರ್ಯಾರೂ ಋಷಿ ವರ್ಗಕ್ಕೆ ಸೇರಿದವರಲ್ಲ ಎಲ್ಲರಿಗೂ ಈ ಅಭಿರುಚಿ ಇದೆ. ಆದರೆ ಅವರ ಈ ಒಂದು ಕೆಲಸವನ್ನು ಸರ್ಕಾರದ ಕೀರ್ತಿಗೆ ಧಕ್ಕೆ ಬರದಂತೆ ನಡೆಸಿಕೊಂಡು ಹೋಗಬೇಕು. ಮಂತ್ರಿ ಸ್ಥಾನದಲ್ಲಿರತಕ್ಕವರಿಗೆ ಮುಖ್ಯವಾಗಿರಬೇಕಾದ್ದು ಮಾನ ಮರ್ಯಾದೆ. ಇವೆರಡೂ ಹೋದಮೇಲೆ ಅಲ್ಲಿರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ದೇವರಾಜ ಅರಸ್ ಅವರು ಈಗ ಕ್ಯಾಬಿನೆಟ್ಟಿನಲ್ಲಿ ಎಷ್ಟು ಜನರನ್ನು ಸೇರಿಸಿಕೊಂಡಿದ್ದಾರೊ ಇಷ್ಟೂ ಜನರನ್ನು ಆ ಸೇರಿಸಿಕೊಳ್ಳತಕ್ಕ ದಿವಸ ಯಾರೂ ಅರಸರನ್ನು ಅಕ್ಷೇಪಣೆ ಮಾಡಲಿಲ್ಲ. ಆದರೆ ಈ ದಿವಸ ನಡೆದಿರತಕ್ಕ ಘೋರ ಪ್ರಸಂಗವನ್ನು ನೋಡಿದರೆ ಮರ್ಯಾದೆವುಳ್ಳವರಾರೂ ತಲೆ ಎತ್ತಿ ಓಡಾಡುವಂತಿಲ್ಲ. ಅದಕ್ಕಾಗಿ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಆಗಲೇಬೇಕು. ಅದಕ್ಕೆ ಒಪ್ಪುವವರೆಗೆ ನಾನು ಸರ್ಕಾರವನ್ನು ಅಂದರೆ ಇಲ್ಲಿ ಯಾವ ಒಂದು ಕೆಲಸವನ್ನೂ ಮಾಡುವುದಕ್ಕೆ ಬಿಡುವುದಿಲ್ಲ. ನಾನು ಕೇಳುತ್ತಿರುವ ವಿಷಯವನ್ನು ಆಡಳಿತ ಪಕ್ಷದಲ್ಲೂ ಕೂಡ ಸ್ವಾಗತ ಮಾಡತಕ್ಕ ಅನೇಕ ಮಾನ್ಯ ಸದಸ್ಯರಿರಬಹುದು. ಪ್ರಾಮಾಣಿಕತೆಯುಳ್ಳವರೂ ಉತ್ತಮ ಚರಿತ್ರೆಯುಳ್ಳವರು ದಕ್ಷರು ಮಂತ್ರಿ ಮಂಡಲದಲ್ಲಿ ಇರುವುದು ಬೇಡ ಎಂದು ಯಾರೂ ಹೇಳಲಾರರು. ಅವರು ಅತ್ತ ಕಡೆಯೇ ಇರಲಿ ಅಥವಾ ಇತ್ತ ಕಡೆಯೇ ಇರಲಿ ಇಂಥ ಒಂದು ಎನ್‌ಕ್ವೈರಿ ಆಗಬೇಕೆಂದು ಕೇಳತಕ್ಕ ಜನ ಅಧಿಕಾರ ಪಕ್ಷದಲ್ಲೂ ಬಹಳ ಜನರಿದ್ದಾರೆಂದು ನಾನು ನಂಬುತ್ತೇನೆ. ಆದರೆ ಶ್ರೀ ಮಾನ್ ಬಸವಲಿಂಗಪ್ಪನವರ ಅಭಿಪ್ರಾಯದಂತೆ ನಮ್ಮ ಮಂತ್ರಿ ಮಂಡಲದಲ್ಲಿ ಅನಿಷ್ಟ ಮಂತ್ರಿಗಳೇ ಇರಲೆಂದು ಹೇಳಿದರೆ ಅದನ್ನು ರಾಜ್ಯದಲ್ಲಿ ಯಾರೂ ಒಪ್ಪಲಾರರೆಂಬುದು ನನ್ನ ಅಭಿಪ್ರಾಯ. ಆದರೆ ಪೋಲೀಸ್ ಎನ್‌ಕ್ವೈರಿಯಲ್ಲಿ ಒಂದು ಏನು ತೊಂದರೆ ಇದೆ ಎಂದರೆ ಅಧಿಕಾರದ ಗದ್ದುಗೆಯಲ್ಲಿರುವಾಗ ಅಲ್ಲಿ ನಿಷ್ಪಕ್ಷಪಾತವಾದ ಒಂದು ಎನ್‌ಕ್ವೈರಿ ನಡೆಯುವುದಕ್ಕೆ ಎಂದಿಗೂ ಸಾಧ್ಯವಿಲ್ಲ. ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕು. ನಿಮ್ಮ ವರ್ತನೆ ಸರಿಯಿಲ್ಲ ಎಂದು ಆರೋಪ ಮಾಡುವುದಕ್ಕೆ ಮುಂಚೆ ಮಂತ್ರಿಮಂಡಲದಿಂದ ಆಶ್ವಾಸನೆ ಬರಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

5.30 P.M.

ಶ್ರೀ ಕೆ ಶ್ರೀರಾಮುಲು : ಕಳೆದ ಮೂರು ದಿವಸಗಳಿಂದ ಹೆಣ್ಣುಮಗಳ ಬಗ್ಗೆ ವಿರೋಧ ಪಕ್ಷದವರು ಒಂದೊಂದು ರೀತಿಯಲ್ಲಿ ಹೇಳುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಆಕೆ ಪೋಲೀಸ್ ಎಸ್‌ಕಾರ್ಟಿನಲ್ಲಿ ಮುಂಬೈಗೆ ಹೋದಳು ಎಂದು ಹೇಳಿದರು, ಪಾಟೀಲ್ ನಾಗರಾಜರವರು ಬೆಂಗಳೂರಿನಲ್ಲೇ ಆಕೆ ಇದ್ದಾಳೆ ಎಂದು ಹೇಳಿದರು, ಸಿದ್ದಪ್ಪನವರು ಮುಚ್ಚಿ ಹಾಕಿದ್ದಾರೆ ಎಂದು ಹೇಳಿದರು. ಈ ರೀತಿ ಮೂರು ಅಭಿಪ್ರಾಯಗಳಿರುವುದ ರಿಂದ ಯಾವ ಅಭಿಪ್ರಾಯದ ಆಧಾರದ ಮೇಲೆ ನಿರ್ಧಾರಕ್ಕೆ ಬರಬೇಕು ?

ಶ್ರೀ ಬಿ. ವಿ. ಕಕ್ಕಿಲಾಯ : ಅದಕ್ಕೇ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಹೇಳುವುದು.

ಶ್ರೀ ಕೆ. ಶ್ರೀರಾಮುಲು : ಆ ಹೆಣ್ಣುಮಗಳು ಬೊಂಬಾಯಿಗೆ ಹೋಗಿ ದ್ದಾರೆ, ಅಪಾಯವಿಲ್ಲ ಎಂದು ಮುಂತಾಗಿ ಹೇಳುವುದು ಕಲ್ಪನೆ ವಿಷಯ ವಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ : ಮುಖ್ಯಮಂತ್ರಿಗಳು ಆಕೆ ಪತ್ತೆಯಿಲ್ಲ ವೆಂದು ಹೇಳಿಕೆ ಕೊಟ್ಟಿರುವುದರಿಂದ ಸಂಶಯ ಬರುವುದು. ಪೋಲೀಸ್ ಎಸ್‌ಕಾರ್ಟಿನಿಂದ ಕಳಿಸಿದರೆಂಬುದು ನಿಜ. ಮುಖ್ಯ ಮಂತ್ರಿಗಳು ಆಕೆ ಪತ್ತೆ ಯಿಲ್ಲವೆಂದು ಹೇಳಿರುವುದರಿಂದ ಸಂಶಯ ಹೆಚ್ಚಾಗಿದೆ. ಆದುದರಿಂದ ಪೋಲೀಸ್ ವರದಿ ತರಿಸುವುದು ಎಂದರೆ........

SRI H. SIDDAVEERAPPA : They do not believe the Policemen but they want their report.

ಶ್ರೀ ಎಚ್. ಡಿ. ದೇವೇಗೌಡ : ಪೋಲೀಸು ಅಧಿಕಾರಿ ತಪ್ಪಲ್ಲ. ತಮ್ಮ ಮರ್ಯಾದೆ ಕಾಪಾಡಿಕೊಳ್ಳಲು ಪೋಲೀಸ್ ಅಧಿಕಾರಿಯ ವರದಿ ಸಪ್ರೆಸ್ ಮಾಡಿ ಸಭೆಯ ಮುಂದೆ ಇಟ್ಟಿದ್ದಾರೆ ಎಂಬ ಸಂಶಯದಿಂದ ವಿಮುಕ್ತರಾಗಬೇಕಾದರೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು.

SRI B. BASAVALINGAPPA.—What is the basis for the hon. member's surmise ? He does not believe the Chief Minister but he believes the version of the Police.

ಶ್ರೀ ಎಚ್. ಡಿ. ದೇವೇಗೌಡ :—ಪೋಲೀಸ್ ವರದಿಯನ್ನು ಮುಚ್ಚಿಡುವುದಕ್ಕೆ ಹೊರಟಿದ್ದೀರಿ. ತಾವು ಹಾಗೆ ತಪ್ಪು ಮಾಡದಿದ್ದರೆ ನಿಷ್ಪಕ್ಷಪಾತವಾಗಿ ಎನ್‌ಕ್ವೈರಿ ಏಕೆ ಮಾಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ :—ಪೋಲೀಸ್ ವರದಿಯನ್ನು ನಂಬುವುದಿಲ್ಲವೆಂದು ಹೇಳುವುದು ಅರ್ಥವಾಗುತ್ತಿಲ್ಲ. ಇಂಥ ಸನ್ನಿವೇಶ ಇದುವರೆಗೆ ಬಂದಿರುವುದೇ ?

ಶ್ರೀ ಎಚ್. ಡಿ. ದೇವೇಗೌಡ :—ಹಿಂದೆ ಮಂತ್ರಿಗಳು ಇಂಥ ಪ್ರಕರಣದಲ್ಲಿ ಇನ್‌ವಾಲ್ವ್ ಆಗಿರಲಿಲ್ಲ. ಸರಕಾರದ ಗೌರವ ಉಳಿಯಬೇಕಾದರೆ, ರಾಜ್ಯಕ್ಕೆ ಗೌರವ ಬರಬೇಕಾದರೆ. ಅವರು ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಅವರು ಹಿಂದಿನಿಂದ ಗೌರವ ಕಾಪಾಡಿಕೊಂಡು ಬಂದಿದ್ದಾರೆ. ಅವರ ಕೀರ್ತಿ ಉಳಿಯಬೇಕಾದರೆ ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕು, ಇಂಥ ಮಂತ್ರಿಮಂಡಲದಲ್ಲಿ ಅವರಿರಬಾರದು. ತಪ್ಪಿರುವುದನ್ನು ಷೀಲ್ಡ್ ಮಾಡಬಾರದು.

ಶ್ರೀ ಎಚ್. ಸಿದ್ದವೀರಪ್ಪ :—ಷೀಲ್ಡ್ ಮಾಡುವುದಕ್ಕೆ ಯಾರೂ ಹೋಗಿಲ್ಲ. ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ :—ಸರಕಾರ ಈ ವಿಚಾರದಲ್ಲಿ ಇಂಡಿಪೆಂಡೆಂಟ್ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದು ಅವಶ್ಯಕ. ಹಾಗೆ ಮಾಡುವುದಾಗಿ ಹೇಳಿದರೆ ನಾವು ಇದರ ಬಗ್ಗೆ ಒಂದು ಚಕಾರ ಶಬ್ದವನ್ನೂ ಎತ್ತುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಈ ಪ್ರಕರಣದಿಂದ ಮಂತ್ರಿಮಂಡಲದ ಮೇಲೆ ಅಪಖ್ಯಾತಿ ಬಂದಿರುವುದರಿಂದ ಮೊದಲು ಮಂತ್ರಿಮಂಡಲ ರಾಜೀನಾಮೆ ಕೊಡಬೇಕು, ನಾವೂ ಕೊಡಬೇಕು. ನಂತರ ಜನರ ಮುಂದೆ ಹೋಗಬೇಕು, ಮತದಾರರು ಯಾರದು ಸರಿ ಯಾರದು ತಪ್ಪು ಎಂದು ತೀರ್ಮಾನ ಮಾಡುವರು.

ಶ್ರೀ ಎಚ್. ಎಂ. ಚನ್ನಬಸಪ್ಪ :—ಇದರ ಬಗ್ಗೆ ವಿಧಿ ನಿಯಮ ಮೀರಿ ಬಹಳ ಕಾಲ ಚರ್ಚೆ ಆಗಿದೆ.

ಶ್ರೀ ವಾಟಾಳ್ ನಾಗರಾಜ್ :—ನೀವು ವಿಧಿ ನಿಯಮಗಳ ಕೊಲೆ ಮಾಡಿದ್ದೀರಿ

ಅಧ್ಯಕ್ಷರು :—ವಿಧಿ ನಿಯಮ ಮೀರಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ತಿಳಿಸಿದರು. ಅದನ್ನು ಕೇಳಿದ್ದೇವೆ. ಮುಖ್ಯಮಂತ್ರಿಗಳು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ವಿಷಯದಲ್ಲಿ ಯಾರೂ ಅನುಮಾನ ಪಡಬೇಕಾಗಿಲ್ಲ. ನಿಮಗಿಂತಲೂ ಹೆಚ್ಚಿನ ಕಳಕಳಿ ನಮಗಿದೆ. ಪರಿಶೀಲನೆ ನಡೆಸಿ ವಾಸ್ತವಾಂಶ ಹೊರಗೆಡಹುವುದಾಗಿ ಅನುಮಾನಕ್ಕೆ ಎಡೆಯಿಲ್ಲದಂತೆ ಒತ್ತಿ ಒತ್ತಿ ಹತ್ತು ತಡವೆ ಹೇಳಿದ್ದಾರೆ. ಸರಕಾರದ ಪರವಾಗಿ ಹೇಳುವುದಾದರೆ ಮುಖ್ಯ ಮಂತ್ರಿಗಳು ಏನು ಸ್ಪಷ್ಟವಾಗಿ ಹೇಳಿದ್ದಾರೆ ಅದಕ್ಕಿಂತ ಹೆಚ್ಚು ಹೇಳುವ ವಿಷಯವೇನೂ ಇಲ್ಲ. ಪ್ರಾರ್ಥನೆ ತಮ್ಮಲ್ಲಿ ಮಾಡುವುದು ಅಸೆಂಬ್ಲಿ ಕೆಲಸವೇನಿದೆ ಅದನ್ನು ನಡೆಸಿಕೊಂಡು ಹೋಗೋಣ, ಪರಿಶೀಲನೆ ಪ್ರಾರಂಭಿಸಿ ವಿಷಯ ಸಂಗ್ರಹಣೆ ಮಾಡಿ ವಾಸ್ತವಾಂಶ ಹೊರಗೆಡಹುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ ಎಂದು ಮತ್ತೊಮ್ಮೆ ಸರಕಾರದ ಪರವಾಗಿ ಭರವಸೆ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ :—ನಾವು ಒತ್ತಾಯ ಮಾಡುತ್ತೇವೆ ಎಂದು ತಿಳಿಯಬಾರದು. ಮಂತ್ರಿಗಳು ಈ ವಿಷಯದಲ್ಲಿ ಇನ್‌ವಾಲ್ವ್ ಆಗಿದ್ದಾರೆ, ಅದರಲ್ಲೂ ಗೃಹ ಸಚಿವರು ಏನಿದ್ದಾರೆ ಅವರ ಮೇಲೆ ದೂರಿದೆ. ಸರಕಾರದ ಒಬ್ಬ ಸಚಿವರ ಮೇಲೆ ಇಂದು ಆಪಾದನೆ ಇದೆ. ಮೈಸೂರಿನಲ್ಲಿ ಕಳೆದ 25 ವರ್ಷಗಳಲ್ಲಿ ಈ ಘಟನೆಯಾಗಿರುವುದು ಇದೇ ಪ್ರಥಮ. ಇದು ನಮ್ಮ ಅನುಭವ. ಹಿರಿಯ ರಾಜಕಾರಣಿಗಳಾದ ಅಧ್ಯಕ್ಷಣಿಯವರೂ ಇದನ್ನು ಒಪ್ಪುವರು. ರಾಜ್ಯ ಸಚಿವರ ಮೇಲೆ ದೂರಿದೆ.

SRI H. SIDDAVEERAPPA :—Where is the complaint? Does the Minister's letter disclose that he has made a complaint to the Deputy Commissioner of Police?

SRI H. M. CHANNABASAPPA.—The Chief Minister, in his statement, has stated that the Minister of State sent for the Deputy Commissioner of Police. There is no intention to shield anybody. There is no need to shield anybody.

ಅಧ್ಯಕ್ಷರು :—ಎಷ್ಟು ಸಾರಿ ಮಾತನಾಡುವುದು? ಮಂತ್ರಿಗಳ ಸ್ಟೇಟ್‌ಮೆಂಟ್ ಆದ ಮೇಲೆ ರೂಲ್ 306ರ ಪ್ರಕಾರ ಕ್ಲಾರಿಫಿಕೇಷನ್ನಿಗೆ ಅವಕಾಶವಿರುವುದಿಲ್ಲ. ಅವರು ವಾಲಂಟರಿಯಾಗಿ ಸ್ಟೇಟ್‌ಮೆಂಟ್ ಮಾಡಿದ ಮೇಲೆ ಕ್ಲಾರಿಫಿಕೇಷನ್ನಿಗೆ ಅವಕಾಶವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ :—306ನೆಯ ರೂಲನ್ನು ಫ್ರೇಮ್ ಮಾಡಿದಾಗ ಮಂತ್ರಿಗಳ ಮನೆಯಲ್ಲಿ ಅವ್ಯವಹಾರ ನಡೆಯುತ್ತದೆ ಎಂದು ಯಾರಿಗೂ ಗೊತ್ತಿರಲಿಲ್ಲ.

ಅಧ್ಯಕ್ಷರು:—ಇದರ ಬಗ್ಗೆ ಸಾಕಾದಷ್ಟು ಚರ್ಚೆಯಾಗಿದೆ, ಇದನ್ನು ಇಲ್ಲಿಗೆ ಮುಗಿಸಿ ಬೇರೆ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್. ಡಿ. ದೇವೇಗೌಡ :— ಚರ್ಚೆಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ :— ಚರ್ಚೆಗೆ ಅವಕಾಶ ಮಾಡುತ್ತೀರಾ ?

ಅಧ್ಯಕ್ಷರು :— ತಾವು ಕೂತುಕೊಳ್ಳಿ, ಸಮಾಧಾನವಾಗಿರಿ, ನೀವು ಹೇಳಿದ್ದನ್ನೆಲ್ಲಾ ನಾವು ಕೇಳಲಿಲ್ಲವೇ ? ನಾವು ಹೇಳಿದ ಎರಡು ಮಾತನ್ನೂ ಕೇಳದಿದ್ದರೆ ಹೇಗೆ? ಈ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ, ಎನ್‌ಕ್ವಯರಿ ಮಾಡುತ್ತೇನೆಂದು ಚೀಫ್ ಮಿನಿಸ್ಟರು ಒಪ್ಪಿಕೊಂಡಿದ್ದಾರೆ. At the first instance that will be only a police enquiry ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದಾದನಂತರ, ಅವರು ಮಾತನಾಡುವಾಗ ಅವರ ಕಳಕಳಿಯನ್ನು ನೋಡಿದರೆ ಅವರ ಕಳವಳ ಎಲ್ಲರಿಗೂ ಗೊತ್ತಾಗುತ್ತದೆ. ಆದ್ದರಿಂದ ಇದನ್ನು ಇಲ್ಲಿಗೆ ಮುಗಿಸಿಬಿಡೋಣ. Let us go on with the business of the House.

ಶ್ರೀ ಹೆಚ್. ಡಿ. ದೇವೇಗೌಡ :— ಇದರ ಬಗ್ಗೆ ಚರ್ಚೆ ಇನ್ನೂ ಮುಗಿದಿಲ್ಲ. ಮುಗಿದಿದ್ದರೆ ಇಷ್ಟು ಪ್ರತಿಭಟನೆಯನ್ನು ನಾವು ಮಾಡಲಿಕ್ಕೆ ಶಕ್ಯ ಇಲ್ಲ. ರೂಲ್ಸ್ ಪ್ರಕಾರ ಈ ವಿಷಯವನ್ನು ಇಲ್ಲಿ ಚರ್ಚೆಮಾಡಬೇಕು ಎಂದು ನೋಟೀಸನ್ನು ಕೊಟ್ಟಿದ್ದೇವೆ. ಇದರ ಪರಿಣಾಮ ಏನಾಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಒಂದು ವೇಳೆ ಸರ್ಕಾರ ಇದನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಿದರೂ ದೇಶದ ಮುಂದೆ ಇದನ್ನು ಮುಚ್ಚಲಿಕ್ಕೆ ಆಗುವುದಿಲ್ಲ. ರೂಲ್ಸ್ ಪ್ರಕಾರ ನೋಟೀಸ್ ಅನ್ನು ಕೊಟ್ಟಿದ್ದೇವೆ, ಆದ್ದರಿಂದ ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಇವರು ಯಾವ ವಿಮಾನದಲ್ಲಿ ಬಂದರು, ಯಾರ ಜೊತೆಯಲ್ಲಿ ಬಂದರು, ಇದರ ಬಗ್ಗೆ ಪೂರ್ಣವಾಗಿ ನಾವು ಇನ್ನೂ ಕೈಹಾಕಿಲ್ಲ.

ಅಧ್ಯಕ್ಷರು:—ಈಗತಾನೇ ನೋಟೀಸು ಬಂದಿದೆ. ಇದನ್ನು ಜಾರಿಗೆ ಕೊಡಬೇಕಲ್ಲ ಎಂದು ನೋಡುತ್ತಿದ್ದೇನೆ. ಅದಕ್ಕೆ ಅವಕಾಶ ಆಗುವುದಾದರೆ ಏರ್ಪಾಡು ಮಾಡಿಕೊಡೋಣ.

ಶ್ರೀ. ಹೆಚ್. ಡಿ. ದೇವೇಗೌಡ :—ಇಂಥ ಗಹನವಾದ ವಿಷಯವನ್ನು ಇಟ್ಟು ಕೊಂಡು ನಾವು ಬೇರೆ ವಿಷಯವನ್ನು ಚರ್ಚೆ ಮಾಡುವುದು ಬೇಡ.

ಅಧ್ಯಕ್ಷರು.—ಈಗ. ಇದನ್ನು ಮುಗಿಸಿಬಿಡಿ.

ಶ್ರೀ ಹೆಚ್. ಡಿ. ದೇವೇಗೌಡ :—ನಾಳೆ ತೆಗೆದುಕೊಳ್ಳೋಣವೇ?

ಅಧ್ಯಕ್ಷರು.—ಸುಭಾಷ್ ಅಸ್ತೂರ್‌ರವರು ತಮ್ಮ ಮಾತನ್ನು ಮುಗಿಸಿ ಬಿಡಲಿ, ಅವರು ಮುಗಿಸಿದ ಮೇಲೆ ಸಭೆಯನ್ನು ಅಡ್ಜರ್ನ್ ಮಾಡುತ್ತೇನೆ.

ಶ್ರೀ. ವಾಟಾಳ್ ನಾಗರಾಜ್.—ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ. ಹೆಚ್. ಡಿ. ದೇವೇಗೌಡ :—ನೋಟೀಸ್ ಪ್ರಕಾರ ಇದನ್ನು ಚರ್ಚೆಗೆ ತೆಗೆದುಕೊಂಡು ಪ್ರತಿದಿವಸ ಇದೇ ಪ್ರಲಾಪ ಮಾಡಿಕೊಳ್ಳುವುದಕ್ಕೆ ಬದಲಾಗಿ ಗುಡ್‌ಗೆಸ್ಚರ್ ತೆಗೆದುಕೊಂಡು ಇಂದೇ ಮುಗಿಸಿಬಿಡೋಣ. ಇದರ ಬಗೆ ಇಂಡಿಪೆಂಡೆಂಟ್ ಎನ್‌ಕ್ವಯರಿ ಮಾಡಬೇಕಾಗುತ್ತದೆ.

SRI H. M. CHANNABASAPPA.—I have already said that there is nothing which I can say at present beyond what the Chief Minister has said.

ಅಧ್ಯಕ್ಷರು.—ಶ್ರೀ. ಸುಭಾಸ್ ಅಸ್ತೂರ್‌ರವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಿಂತ ಮುಖ್ಯ ವಿಷಯ ನಿಮಗೆ ಬೇಕೆ?

ಶ್ರೀ ಹೆಚ್. ಡಿ. ದೇವೇಗೌಡ :—ಇದು ಮತ್ತೆ ನಾಳೆ ಬೆಳಿಗ್ಗೆ ಪುನಃ ಪ್ರಾರಂಭವಾಗುತ್ತದೆ ಎಂದು ನಾನು ಹೇಳುತ್ತೇನೆ. ದಯಮಾಡಿ ತಾವು ನಾಳೆ ನಾವು ಕೊಟ್ಟ ನೋಟೀಸಿನ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಇಷ್ಟು ಸೌಮ್ಯತೆಯಿಂದ ಪ್ರಾರ್ಥನೆ ಮಾಡಿ, ಇದರ ಬಗ್ಗೆ ನಾವು ಒತ್ತಾಯ ಮಾಡು ವುದಕ್ಕೆ ತಾವು ತಪ್ಪು ತಿಳಿಯಬಾರದು.

MADAM SPEAKER :—Mr. Subash Asture may begin his speech.

SRI SUBASH ASTURE :—I was saying about two basic important things. We should change our attitude of our people towards agriculture.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದಕ್ಕಿಂತ ಮುಖ್ಯ ವಿಷಯ ನಿಮಗೆ ಬೇಕೆ?

ಶ್ರೀ ಕೋಣಂದೂರು ಲಿಂಗಪ್ಪ.—ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು.

ಅಧ್ಯಕ್ಷರು.—ತಿರುಗಿ ನಿಮ್ಮ ವ್ಯಾಖ್ಯಾನಬೇಡ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದರ ಬಗ್ಗೆ ಏನಾದರೂ ಸ್ಪಷ್ಟವಾದ ಹೇಳಿಕೆ ಕೊಡಲಿ, ಇಷ್ಟೊಂದು ಪ್ರಾರ್ಥಿಸಿಕೊಂಡರೂ ಅವರು ಹಿಮಾಲಯ ಪರ್ವತದ ಹಾಗೆ ಕೂತುಕೊಂಡಿದ್ದಾರೆ. ಇಂಥ ವಿಷಯಗಳು ಬಂದಾಗ ಹಿಮಾಲಯ ಪರ್ವತ ಕರಗಿ ನೀರಾಗಿ ಹರಿಯಬೇಕು, ಆದರೆ ನೀವು ಶಾಂತಿಯಿಂದ ಕುಳಿತುಕೊಂಡಿದ್ದೀರಿ.

(ವಿರೋಧಪಕ್ಷದ ಆರು-ಏಳು ಜನ ಸದಸ್ಯರು ಮಾತನಾಡುವುದಕ್ಕೆ ಶುರು ಮಾಡಿದರು)

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಲೇಬೇಕು. ಇಲ್ಲದೆ ಹೋದರೆ ಸಭೆಯ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು.—ಇದು ಬಹಳ ಜಾಸ್ತಿಯಾಯಿತು. ನೀವು ಹೇಳಿದ್ದು ಮಾಡಬೇಕೇ? Let the Chief Minister know your mind.

ಶ್ರೀ ವಾಟಾಳ್ ನಾಗರಾಜ್.—ನ್ಯಾಯಾಂಗ ವಿಚಾರಣೆಯಾಗುವವರೆಗೆ ಈ ಸಭೆಯ ಬೇರೆ ಕಾರ್ಯಕಲಾಪ ಬೇಡ.

ಅಧ್ಯಕ್ಷರು.—ಅವರು ಹೇಳುವವರು ಹೇಳಿದ್ದಾರೆ, ಚರ್ಚೆಗೆ ಕಾಲಾವಕಾಶ ಕೊಡಬೇಕೇ ಎಂದು ನೋಡಿ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ಈ ವಿಷಯದಲ್ಲಿ ನಾವು ಯಾರೂ ಅನಾವಶ್ಯಕವಾಗಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕಾಗಿಲ್ಲ.

ಅಧ್ಯಕ್ಷರು.—ತಾವು ಇದನ್ನು ಸಾವಿರ ಸರ್ತಿ ಹೇಳಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಒಪ್ಪುತ್ತಾ ಇಲ್ಲ.

ಅಧ್ಯಕ್ಷರು.- ನಾನು ಚೀಫ್ ಮಿನಿಸ್ಟರನ್ನು ಕೇಳಬೇಡವೇ ?

ಶ್ರೀ ವಾಟಾಳ್ ನಾಗರಾಜ್.—ಸರ್ಕಾರ ಬಿಜಾಪುರದ ಗೋಳಗುಮ್ಮಟ ಇದ್ದ ಹಾಗೆ ಇದೆ, ಅವರಿಗ ಹೃದಯ ಇಲ್ಲ, ಪೊಳ್ಳು ಸರ್ಕಾರ, ಭಂಡ ಸರ್ಕಾರ.

ಅಧ್ಯಕ್ಷರು.—ಅಸೆಂಬ್ಲಿ ನಿಮ್ಮದು ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇಂಥ ವಿಷಯದಲ್ಲಿ ಸರ್ಕಾರ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಒಪ್ಪುವುದಿಲ್ಲ ಎಂದರೆ ನಾವು ಇದಕ್ಕೆ ಎಷ್ಟು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕೋ ?

ಅಧ್ಯಕ್ಷರು.—ನಾಗರಾಜ್ ಹೀಗೆ ಕೂಗಿಕೊಂಡರೆ ಹೇಗೆ, ಒಂದೊಂದು ಸರ್ತಿ ನಿಮಗೆ ಎಲೆಕ್ಟ್ರಿಸಿಟಿ ಉತ್ಪತ್ತಿಯಾದಂತಾಗುತ್ತದೆ, ಇಷ್ಟು ಟಾಪ್ ವಾಯ್ಸ್‌ನಲ್ಲಿ ನಾನು ಕೂಗಿಕೊಂಡರೂ ಅದು ನಿಮ್ಮ ಕಿವಿಯೊಳಗೆ ಹೋಗದಿದ್ದರೆ ಏನು ಮಾಡುವುದು ?

ಶ್ರೀ ಕಾಗೋಡು ತಿಮ್ಮಪ್ಪ.—ಸತ್ಯಾಂಶವನ್ನು ಮುಚ್ಚಿ ಹಾಕುವುದಕ್ಕೆ ಪೋಲೀಸರು ಶರೀಕು ಆಗಿದ್ದಾರೆ ಎಂದು ಹೇಳಿಕೆಯಿಂದ ಗೊತ್ತಾಗುತ್ತದೆ ನ್ಯಾಯಾಂಗ ತನಿಖೆ ಆದರೆ ಸತ್ಯಾಂಶ ಹೊರಗೆ ಬರುತ್ತದೆ

ಅಧ್ಯಕ್ಷರು :—Sri Asture may continue his speech tomorrow Sri M. S. Krishnan's half-an-hour discussion is there, but if he does not want it today, it will lapse.

SRI H. S. SIDDAPPA :—We can forego anything.

ಶ್ರೀ ವಾಟಾಳ್ ನಾಗರಾಜ್.—ನೀತಿಗೆಟ್ಟ ಸರ್ಕಾರಕ್ಕೆ ಧಿಕ್ಕಾರ........

MADAM SPEAKER :—That is not fair, Sri Vatal Nagaraj cannot hold the House to ransome like this.

(Interruption from opposition Members—Sri H. D. Devegowda, Sri Vatal Nagaraj Sri Kagodu Thimmappa, Konandur Lingappa all standing).

The House Stands Adjourned to meet tomorrow at 9-00 A. M.

The House adjourned at fifty minutes past five of the Clock and meet again at Nine of the Clock on Saturday, the 26th May, 1973.

— —

WD 146—GEPC—550—16 2-74